# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು-570006**

ದಿನಾಂಕ: 12-10-2020 ರಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 56ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಲಿಂಗರಾಜ ಗಾಂಧಿ**<br>ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) (ಪ್ರ.ಭಾ) ಹಾಗು<br>ಡೀನ್ (ಅಧ್ಯಯನ ಕೇಂದ್ರಗಳು), ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕವಿತಾ ರೈ**<br>ಕುಲಸಚಿವ (ಪರೀಕ್ಷಾಂಗ) (ಪ್ರ.ಭಾ) ಹಾಗು<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | |

| ಗೈರುಹಾಜರಿ |
|---|
| **ಡಾ. ಲಕ್ಷ್ಮಿ .ಎನ್**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |

| ವಿಶೇಷ ಆಹ್ವಾನಿತರು | | |
|---|---|---|
| **ಡಾ. ನಿರಂಜನ್ ರಾಜ್**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>ವಿಶೇಷಾಧಿಕಾರಿ – ODL<br>ಕರಾಮುವಿ, ಮೈಸೂರು. | **ಡಾ. ಆರ್.ಹೆಚ್. ಪವಿತ್ರ**<br>ವಿಶೇಷಾಧಿಕಾರಿ – Online<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, ಹಿಂದಿನ ಡೀನ್ (ಶೈಕ್ಷಣಿಕ) ರವರಾಗಿದ್ದ ಡಾ. ತೇಜಸ್ವಿ ನವಿಲೂರ್ ರವರು ರಾಜೀನಾಮೆ ಕೊಟ್ಟಿರುವ ವಿಷಯವನ್ನು ತಿಳಿಸಿದರು. ಅವರು ಕಾರ್ಯಭಾರವನ್ನು ವಹಿಸಿಕೊಂಡ ದಿನದಿಂದ ಡೀನ್ (ಶೈಕ್ಷಣಿಕ) ರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅನೇಕ ಉತ್ತಮ ಕಾರ್ಯಗಳನ್ನು ಮಾಡಿರುತ್ತಾರೆ ಎಂದು ಶ್ಲಾಘಿಸಿದರು. ಮುಂದುವರೆದು ಪ್ರಸ್ತುತ ಡೀನ್ (ಶೈಕ್ಷಣಿಕ) ರಾಗಿ ಪ್ರೊ. ಕಾಂಬ್ಳೆ ಅಶೋಕ್ ರವರಿಗೆ ಕಾರ್ಯಭಾರ ನೀಡಿರುವುದರಿಂದ 56ನೇ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಅವರಿಗೆ ಸೂಚಿಸಿದರು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 56.01

ವಿಷಯ : 2020–21ನೇ ಸಾಲಿನ July Cycle (September-October) ನ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಿರುವ ಬಗ್ಗೆ.

****

2020–21ನೇ ಸಾಲಿನ July Cycle (September-October) ನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಪ್ರತಿಯೊಂದು ಕಾರ್ಯಕ್ರಮದ ಪ್ರವೇಶಾತಿ ಅರ್ಹತೆಯನ್ನು ಆಯಾ ಆಧ್ಯಾದೇಶಗಳ ಪ್ರಕಾರ ನಿಗದಿಪಡಿಸಿ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ. ಸದರಿ ವಿವರಣಾ ಪುಸ್ತಕಗಳನ್ನು ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.ksoumysuru.ac.in ನಲ್ಲಿ ಪ್ರಕಟಿಸಲಾಗಿದೆ.

1. **B.A, B.Com and B.Lib.I.Sc**
2. **M.A:** (Kannada, English, Hindi, Sanskrit, Urdu, History, Economics, Political Science, Public Administration, Sociology, Ancient History and Archeology, Journalism and Mass Communication.
3. **M.Com,**
4. **M.Sc.:** (Bio-Chemistry, Bio-Technology, Chemistry, Clinical Nutrition and Dietetics, Environmental·Science, Computer Science, Geography, Information Science, Mathematics, Micro Biology, Physics, Psychology)
5. **M.Lib.I.Sc** Programmes
6. **MBA** Programme
7. **Post – Graduate Diploma Programmes:** (Post – Graduate Diploma in English (PGDE), Post– Graduate Diploma in Communicative English (PGDCE) Post – Graduate Diploma in Human Resource Management (PGDHRM),
   Post – Graduate Diploma in Financial Management (PGDFM), Post – Graduate Diploma in Business Administration (PGDBA), Post – Graduate Diploma in Marketing Management (PGDMM), Post – Graduate Diploma in Nutrition and Deitetics (PGDND), Post – Graduate Diploma in Journalism and Mass Communication (PGDJMC) , Post –Graduate Diploma in Kuvempu Sahithya (PGDKS), Post–Graduate Diploma in Business Law (PGDBL), Post – Graduate Diploma in Information Science (PGDIS), Post – Graduate Diploma in Computer Application (PGDCA), Post – Graduate Diploma in Ambedkar Studies (PGDAS))
8. **Diploma Programmes :** (Diploma in Kannada (DIK), Diploma in Journalism (DIJ), Diploma in Nutrition and Health Education (DNHE), Diploma in Information Science (DIS), Diploma in Computer Application (DCA))
9. **Certificate Programmes:** (Certificate in Kannada (CIK), Certificate in Panchayath Raj (CPR), Certificate in Nutrition and Food (CNF))

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಮುಂದೆ ಘಟನೋತ್ತರ ಮಂಜೂರಾತಿ/ ಅನುಮೋದನೆಗಾಗಿ ಮಂಡಿಸಿದೆ.

**ಚರ್ಚೆ :** ಮುಂದಿನ ಶೈಕ್ಷಣಿಕ ಸಾಲಿನಲ್ಲಿ ವಿವರಣಾ ಪುಸ್ತಕವನ್ನು ಸಿದ್ಧಪಡಿಸುವಾಗ **UGC (ODL & Online Programmes)** ನಿಯಮಾವಳಿ **2020** ರಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನು ಅಳವಡಿಸಿಕೊಳ್ಳಲು ಕುಲಸಚಿವರು ತಿಳಿಸಿದರು.

ಕುಲಸಚಿವರು

ಕುಲಪತಿಗಳು

ತೀರ್ಮಾನ : 2020–21ನೇ ಸಾಲಿನ July Cycle (September-October) ನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಮೇಲ್ಕಂಡ ಕಾರ್ಯಕ್ರಮಗಳ ವಿವರಣಾ ಪುಸ್ತಕಗಳನ್ನು ನಿಯಮಾನುಸಾರ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.ksoumysuru.ac.in ನಲ್ಲಿ ಪ್ರಕಟಿಸಲಾಗಿರುವುದನ್ನು ಹಾಗು ಪ್ರವೇಶಾತಿ ಆರಂಭಿಸಿರುವುದನ್ನು ಅನುಮೋದಿಸಲಾಯಿತು.

## ವಿಷಯ ಸಂಖ್ಯೆ: 56.02

ವಿಷಯ: ಕರಾಮುವಿಯಲ್ಲಿ ವಿಶ್ವವಿದ್ಯಾನಿಲಯ – ಉದ್ದಿಮೆ/ಸಂಸ್ಥೆ ಸಹಯೋಗ ಘಟಕ ಆರಂಭಿಸುವುದರ ಬಗ್ಗೆ.

*****

ಕರಾಮುವಿಯಲ್ಲಿ ಒಂದು ವಿಶ್ವವಿದ್ಯಾನಿಲಯ–ಉದ್ದಿಮೆ/ಸಂಸ್ಥೆ ಸಹಯೋಗ ಘಟಕ ಆರಂಭಿಸುವುದು ಅವಶ್ಯವಾಗಿದೆ. ಹೊಸ ಶಿಕ್ಷಣ ನೀತಿಯಲ್ಲೂ ಸಹಾ ಉದ್ದಿಮೆ ಸ್ನೇಹಿ ಶಿಕ್ಷಣಕ್ಕೆ ಒತ್ತು ನೀಡಿದ್ದು, ಇನ್ನು ಮುಂದೆ ಎಲ್ಲಾ ಸ್ನಾತಕ ಕಾರ್ಯಕ್ರಮಗಳಲ್ಲಿ ಇಂಟರ್ನ್‌ಶಿಪ್ ಅಳವಡಿಸಿಕೊಳ್ಳುವುದರ ಬಗ್ಗೆ ಪ್ರಸ್ತಾಪಿಸಲಾಗಿದೆ.

ಅಲ್ಲದೇ ಈ ಸಹಯೋಗ ಘಟಕ ಆರಂಭಿಸಿದಲ್ಲಿ, ಇದರ ಮೂಲಕ ವಿವಿಯು ಕನ್ಸಲ್ಟೆಂಟ್ಸಿ ಪ್ರಾಜೆಕ್ಟ್‌ಗಳನ್ನು ಪಡೆಯಲು ಪ್ರಯತ್ನಿಸಬಹುದಾಗಿದೆ. ಅಲ್ಲದೇ Industry Integrated ಕಾರ್ಯಕ್ರಮಗಳನ್ನು ಆರಂಭಿಸಬಹುದಾಗಿದೆ.

ಇಂತಹ ಘಟಕದ ಮೂಲಕ ವಿವಿಯ ವತಿಯಿಂದ ಅಥವಾ ಪ್ರತ್ಯೇಕ ಅಧ್ಯಯನ ವಿಭಾಗಗಳ ವತಿಯಿಂದ ವೃತ್ತಿಪರ ಸಂಸ್ಥೆಗಳ ಸದಸ್ಯತ್ವ ಪಡೆಯಬಹುದಾಗಿದೆ.

ಕರಾಮುವಿಯ ನಿರ್ವಹಣಾಶಾಸ್ತ್ರ ವಿಭಾಗವು ಈ ಹಿನ್ನಲೆಯಲ್ಲಿ ಈಗಾಗಲೇ ಮೈಸೂರಿನ ಆಯ್ದು ಕಂಪನಿಗಳ ಮುಖ್ಯಸ್ಥರನ್ನು ಆಹ್ವಾನಿಸಿ ಒಂದು ಕಾರ್ಯಾಗಾರ ನಡೆಸಿದ್ದು ಉತ್ತಮ ಪ್ರತಿಕ್ರಿಯೆ ಬಂದಿರುತ್ತದೆ. ಸದರಿ ಘಟಕವನ್ನು ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಕೆಳಗಡೆ ಆರಂಭಿಸಬಹುದಾಗಿದೆ. ಸದರಿ ಘಟಕಕ್ಕೆ ಒಬ್ಬ ಸಂಯೋಜಕರನ್ನು ನೇಮಿಸಬಹುದಾಗಿದೆ, ಆಯ್ದ ಕಂಪನಿಗಳ ಮುಖ್ಯಸ್ಥರು ಹಾಗೂ ಇನ್ನಿತರ ಪರಿಣಿತರನ್ನು ಆಹ್ವಾನಿಸಿ ವಿವಿಯ ಮಟ್ಟದಲ್ಲಿ ಒಂದು ಪ್ರಾಥಮಿಕ ಸಭೆ ನಡಸಿ ಘಟಕದ ರೂಪುರೇಷೆಗಳನ್ನು ಹಾಗೂ ನಿಯಮಾವಳಿಗಳನ್ನು ಸಿದ್ಧಪಡಿಸಬಹುದಾಗಿದೆ.

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : ಕರಾಮುವಿಯಲ್ಲಿ ವಿಶ್ವವಿದ್ಯಾನಿಲಯ – ಉದ್ದಿಮೆ/ ಸಂಸ್ಥೆ ಸಹಯೋಗ ಘಟಕವನ್ನು ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಕೆಳಗಡೆ ಆರಂಭಿಸಲು ಅನುಮೋದಿಸಲಾಯಿತು. ಸದರಿ ಘಟಕಕ್ಕೆ ಸಂಯೋಜಕರನ್ನು ನೇಮಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕುಲಸಚಿವರು ಕುಲಪತಿಗಳು

## ವಿಷಯ ಸಂಖ್ಯೆ: 56.03

ವಿಷಯ : ಸಂಶೋಧನೆ ಮತ್ತು ಅಭಿವೃದ್ಧಿ ಘಟಕಕ್ಕೆ ಸಂಬಂಧಿಸಿದ ಅಧ್ಯಾದೇಶವನ್ನು ಅನುಮೋದಿಸುವುದರ ಬಗ್ಗೆ.

****

ಕರಾಮುವಿಯಲ್ಲಿ ದಿನಾಂಕ 11, ನವೆಂಬರ್ 2019 ರಂದು ಸಂಶೋಧನಾ ಮತ್ತು ಅಭಿವೃದ್ಧಿ ಘಟಕವನ್ನು ಅರಂಭಿಸಿದ್ದು, ಸದರಿ ಘಟಕದ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಡೆಸಲು ಕಾರ್ಯವೈಖರಿ ಕುರಿತಾಗಿ ಅಧ್ಯಾದೇಶವನ್ನು ಸಿದ್ಧಪಡಿಸಿದ್ದು ಶೈಕ್ಷಣಿಕ ಮಂಡಳಿ ಹಾಗೂ ವ್ಯವಸ್ಥಾಪನಾ ಮಂಡಳಿ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ಚರ್ಚೆ : ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಡೆಸಲು ಸ್ವತಂತ್ರ ನಿರ್ದೇಶಕರ ಅವಶ್ಯಕತೆ ಇದೆ ಎಂದು ಕುಲಸಚಿವರು ತಿಳಿಸಿದರು.**

**ತೀರ್ಮಾನ: ಪ್ರಸ್ತುತ ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಡೆಸಲು ಕಾರ್ಯವೈಖರಿ ಕುರಿತಾಗಿ ಸಿದ್ಧಪಡಿಸಿರುವ ಅಧ್ಯಾದೇಶಕ್ಕೆ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ: 56.04

ವಿಷಯ: ಕರಾಮುವಿ ಅಧ್ಯಾಪಕರಿಗೆ ಮೈನರ್ ಪ್ರಾಜೆಕ್ಟ್‌ಗಳನ್ನು ಪ್ರಾಯೋಜಿಸುವ ಬಗ್ಗೆ.

****

ಬೋಧನೆ, ಸಂಶೋದನೆ ಹಾಗೂ ವಿಸ್ತರಣಾ ಚಟುವಟಿಕೆಗಳು ಈ ಮೂರು ವಿಶ್ವವಿದ್ಯಾನಿಲಯದ ಬೋಧಕರ ಪ್ರಾಥಮಿಕ ಜವಾಬ್ದಾರಿಯಾಗಿವೆ. ವಿಶ್ವವಿದ್ಯಾನಿಲಯಗಳ ಅಧ್ಯಾಪಕರು ಕೈಗೊಳ್ಳುವ ಸಂಶೋಧನೆಗಳು ಹಾಗೂ ಚಟುವಟಿಕೆಗಳು ವಿಶ್ವವಿದ್ಯಾನಿಲಯಗಳ ವಿವಿಧ ಶೈಕಣಿಕ ಸ್ಥಾನಮಾನಗಳ ಮಾನದಂಡವಾಗಿವೆ. ಕರಾಮುವಿಗೆ ಪ್ರಸ್ತುತ 12ಬಿ ಮಾನ್ಯತೆ ಇಲ್ಲದ ಕಾರಣ UGC, DST, ICSSR ನಂತಹ ಅನೇಕ ಸಂಸ್ಥೆಗಳು ಪ್ರಾಯೋಜಕತ್ವವನ್ನು (ಸ್ಪಾನ್ಸಾರ್) ನಿರಾಕರಿಸುತ್ತಿವೆ, ಅಲ್ಲದೆ ಪ್ರತಿಷ್ಠಿತ ಸಂಸ್ಥೆಗಳಿಂದ ಪ್ರಾಜೆಕ್ಟಗಳನ್ನು ಪಡೆಯಲು ಸಂಶೋಧನ ಅನುಭವವನ್ನು ಪರಿಗಣಿಸುವುದರಿಂದ ಸಂಶೋಧನಾ ಅನುಭವ ನೀಡಲು ದೇಶದ ಹಲವಾರು ವಿಶ್ವವಿದ್ಯಾನಿಲಯಗಳು ತಮ್ಮ ಅಧ್ಯಾಪಕರಿಗೆ ಮೈನರ್ ಪ್ರಾಜೆಕ್ಟ್‌ಗಳನ್ನು ತಮ್ಮ ಅಂತರಿಕ ಹಣಕಾಸು ಸಂಪನ್ಮೂಲ ಸೌಲಭ್ಯವನ್ನು ಬಳಸಿ ಕಲ್ಪಿಸುತ್ತಿವೆ

ಕರಾಮುವಿಯಲ್ಲಿ ಇದುವರೆಗೂ ಬಾಹ್ಯ ಸಂಸ್ಥೆಗಳಿಂದ ಪ್ರಾಜೆಕ್ಟ್ ಪಡೆಯದ ಪಿಹೆಚ್.ಡಿ ಪಡೆದಿರುವ ಅಧ್ಯಾಪಕರಿಗೆ ಒಂದು ಬಾರಿಗೆ ಈ ಸೌಲಭ್ಯ ನೀಡಬಹುದಾಗಿದೆ. ಅಸಕ್ತ ಅಧ್ಯಾಪಕರಿಂದ ಪ್ರಸ್ತಾವನೆ ಪಡೆದು ತಜ್ಞರ ಸಮಿತಿಯನ್ನು ನೇಮಿಸಿ ಪರಿಶೀಲಿಸಿ ಆಯ್ದ ಪ್ರಸ್ತಾವನೆಗಳಿಗೆ ರೂ. ಒಂದು ಲಕ್ಷದವರೆಗೆ ಸಂಶೋಧನಾ ಪ್ರಾಯೋಜನ ನೀಡಬಹುದಾಗಿದೆ. ಇದಕ್ಕಾಗಿ ವಿವಿಯ ಅಂತರಿಕ ನಿಧಿಯಿಂದ ಪ್ರತಿ ವರ್ಷ ನಿಗಧಿತ ಆಯವ್ಯಯವನ್ನು ಕಾಯ್ದಿರಿಸಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಉದ್ದೇಶಿತ ನಿಯಮಾವಳಿಗಳನ್ನು ಸಿದ್ದಪಡಿಸಲಾಗಿದೆ.

ಪ್ರಸ್ತುತ ಕರಾಮುವಿಯು ನ್ಯಾಕ್ ಹಾಗೂ NIRF ಪರಿಶೀಲನೆಗೆ ಒಳಪಡಬೇಕಿದ್ದು ಇದಕ್ಕೆ ಸಂಬಂದಿಸಿದಂತೆ ಮುಕ್ತ ವಿಶ್ವವಿದ್ಯಾನಿಲಯಗಳಿಗೆ ನ್ಯಾಕ್ ಸಿದ್ದ ಪಡಿಸಿರುವ ಕೈಪಿಡಿಯ ಪರಿಚ್ಛೇದ 3.2.2. ನಲ್ಲಿಯು ಸಹಾ ವಿವಿಯಲ್ಲಿ ಪ್ರಾಜೆಕ್ಟ್ ಮಾಡಿರುವ ಅಧ್ಯಾಪಕರ ಸಂಖ್ಯೆ ಹಾಗೂ ವಿವಿಯ ಒಟ್ಟು ಅಧ್ಯಾಪಕರ ಸಂಖ್ಯೆಯ ಅನುಪಾತ ಕೇಳಿರುವುದರಿಂದ ಈ ಯೋಜನೆ ಸಹಕಾರಿಯಾಗಲಿದೆ ಹಾಗೂ ವಿವಿಯ ಅಧ್ಯಾಪಕರಿಗೆ ಬಾಹ್ಯ ಸಂಸ್ಥೆಗಳಿಂದ ಪ್ರಾಯೋಜಕತ್ವ ಪಡೆಯಲು ಅನುಕೂಲವಾಗಲಿದೆ.

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

**ಕುಲಸಚಿವರು** **ಕುಲಪತಿಗಳು**

ತೀರ್ಮಾನ : ಕರಾಮುವಿ ಅಧ್ಯಾಪಕರಿಗೆ ಮೈನರ್ ಪ್ರಾಜೆಕ್ಟ್‌ಗಳನ್ನು ಪ್ರಾಯೋಜಿಸುವ ಬಗ್ಗೆ ನಿಯಮಾವಳಿಯಲ್ಲಿ **Institution of Minor Research Fellowship to Faculty** ಎಂದು ಶೀರ್ಷಿಕೆಯನ್ನು ತಿದ್ದುಪಡಿ ಮಾಡಿ ನಿಯಮಾವಳಿಗೆ ಅನುಮೋದನೆ ನೀಡಲಾಯಿತು. ಪ್ರಾಜೆಕ್ಟ್ ಪಡೆಯುವ ಅಧ್ಯಾಪಕರು **Peer Reviewed Journal** ನಲ್ಲಿ ಸದರಿ ವಿಷಯದ ಕುರಿತು ಒಂದು ಲೇಖನವನ್ನು ಪ್ರಕಟಿಸಬೇಕು ಎಂದು ನಿಯಮಾವಳಿಯಲ್ಲಿ ಸೇರಿಸಲು ತಿಳಿಸಲಾಯಿತು. ಈ ವರ್ಷ **2020–21** ನೇ ಸಾಲಿಗಾಗಿ ರೂ.**25** ಲಕ್ಷಗಳನ್ನು ಆಯವ್ಯಯದಲ್ಲಿ ಹೊಂದಾಣಿಕೆ ಮಾಡಿಕೊಂಡು ಅವಕಾಶ ಕಲ್ಪಿಸಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ: 56.05

ವಿಷಯ: ಕರಾಮುವಿಯಲ್ಲಿ ವಿಶೇಷ ಉಪನ್ಯಾಸ ನಡೆಸುವುದರ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು, ಆಸಕ್ತರು ಹಾಗೂ ವಿದ್ಯಾರ್ಥಿಗಳಿಗಾಗಿ ವಿಷಯವಾರು ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಬಹುದಾಗಿದೆ. ಪ್ರಸ್ತುತ ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರಚಲಿತ ವಿದ್ಯಾಮಾನಗಳ ಹಾಗೂ ವಿಶೇಷ ವಿಷಯಗಳ ಕುರಿತು ಅರಿವು ಮೂಡಿಸಲು ಇಂತಹ ವಿಶೇಷ ಉಪನ್ಯಾಸಗಳನ್ನು ವಿಭಾಗಗಳ ವತಿಗಳಿಂದ, ವಿವಿಯ ವತಿಯಿಂದ ಅಥವಾ ಪೀಠಗಳ ವತಿಯಿಂದ ಹಮ್ಮಿಕೊಳ್ಳಬಹುದಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನ ಎಲ್ಲಾ ಆಯಾಮಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವತ್ತ ಹೆಜ್ಜೆಗಳನ್ನಿಟ್ಟು ಮುಂಚೂಣಿಯಲ್ಲಿ ಸಾಗುತ್ತಿದೆ. ಪ್ರಸ್ತುತ ಕರಾಮುವಿಯು KSOU Connect ಅಭಿವೃದ್ಧಿ ಪಡಿಸಿ ಆನ್‌ಲೈನ್ ತರಗತಿಗಳನ್ನು ಯಶಸ್ವಿಯಾಗಿ ನಡೆಸಿದೆ, ಇದರಿಂದಾಗಿ ಪ್ರಪಂಚದಾದ್ಯಂತ ಲಭ್ಯವಿರುವ ಪರಿಣಿತರಿಂದ ವಿಶೇಷ ಉಪನ್ಯಾಸಗಳನ್ನು ಆನ್‌ಲೈನ್‌ನಲ್ಲಿಯೂ ಸಹಾ ಏರ್ಪಡಿಸಬಹುದಾಗಿದೆ. ಇದರಿಂದ ಕರಾಮುವಿಯ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು ಹೆಚ್ಚು ಸಂಪನ್ನವಾಗಿ ಹೆಚ್ಚು ಆಸಕ್ತರನ್ನು ಸೆಳೆದು ಪ್ರವೇಶಾತಿ ಹೆಚ್ಚಿಸಿಕೊಳ್ಳಲು ಪೂರಕವಾಗಲಿವೆ. ಯುಜಿಸಿಯು ಸಹಾ ಇಂತಹ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾನಿಲಯಗಳನ್ನು ಉತ್ತೇಜಿಸುತ್ತಿದೆ.

ಎಲ್ಲಾ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳು, ಕಾಲೇಜುಗಳು ಇಂತಹ ವಿಶೇಷ ಉಪನ್ಯಾಸಗಳನ್ನು ನಿಯಮಿತವಾಗಿ ನಡೆಸುತ್ತಿವೆ. ಇಂತಹ ವಿಶೇಷ ಉಪನ್ಯಾಸಗಳನ್ನು ನೇರ ಸಂಪರ್ಕದ ಮೂಲಕ ಅಥವಾ ಆನ್‌ಲೈನ್ ಮುಖಾಂತರ ನಡೆಸಲು ಅನುವು ಮಾಡಿಕೊಡಲು ಈ ಕೆಳಕಂಡಂತೆ ಸಂಭಾವನೆ ನಿಗದಿ ಪಡಿಸಿ ಅವಕಾಶ ಮಾಡಿ ಕೊಡಬಹುದಾಗಿದೆ

ಭಾರತದ ತಜ್ಞರಿಗೆ : ರೂ.2,000/– ಪ್ರತಿ ಗಂಟೆಗೆ

ವಿದೇಶಿ ತಜ್ಞರಿಗೆ : ರೂ.4,000/– ಪ್ರತಿ ಗಂಟೆಗೆ

ಮೇಲ್ಕಂಡ ವಿಷಯದ ಕುರಿತು ಸ್ಥಾಯಿ ಆದೇಶಕ್ಕಾಗಿ ಶೈಕ್ಷಣಿಕ ಮಂಡಳಿಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

ಚರ್ಚೆ : ಈಗಾಗಲೇ ಡೀನ್ (ಶೈಕ್ಷಣಿಕ) ಹಾಗು **CIQA** ನಿರ್ದೇಶಕರುಗಳಿಗೆ ಸೆಮಿನಾರ್, ಕಾರ್ಯಗಾರ ಹಾಗು ಸಮ್ಮೇಳನಕ್ಕಾಗಿ ನೀಡಿರುವ **Budget** ಅನುದಾನವು ಬಳಕೆಯಾಗದಿರುವುದನ್ನು ಗಮನಿಸಲಾಯಿತು.

ತೀರ್ಮಾನ : ಕರಾಮುವಿಯಲ್ಲಿ ವಿವಿಯ ವತಿಯಿಂದ, ವಿಭಾಗಗಳ ವತಿಯಿಂದ ಹಾಗು ಪೀಠಗಳ ವತಿಯಿಂದ ವಿಶೇಷ ಉಪನ್ಯಾಸಗಳನ್ನು ನಡೆಸಲು ಹಾಗು ಅದಕ್ಕೆ ತಗಲುವ ವೆಚ್ಚ ಹಾಗು ಇನ್ನಿತರ ವಿಷಯಗಳ ಬಗ್ಗೆ ಪ್ರಸ್ತಾವನೆ ಪಡೆಯಲು ಸುತ್ತೋಲೆ ಹೊರಡಿಸಲು ತೀರ್ಮಾನಿಸಲಾಯಿತು. ಸದರಿ ವೆಚ್ಚವನ್ನು ಡೀನ್ (ಶೈಕ್ಷಣಿಕ) ಹಾಗು **CIQA** ನಿರ್ದೇಶಕರುಗಳಿಗೆ ಸೆಮಿನಾರ್, ಕಾರ್ಯಗಾರ ಹಾಗು ಸಮ್ಮೇಳನಕ್ಕಾಗಿ ಮೀಸಲಿಟ್ಟಿರುವ **Budget** ಅನುದಾನದಡಿಯಲ್ಲಿ ಭರಿಸಲು ತೀರ್ಮಾನಿಸಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 56.06

**ವಿಷಯ:** ಎಂ.ಕಾಂ, ವಿದ್ಯಾರ್ಥಿಯ ಲಿಖಿತ ನಿಬಂಧನೆಗಳ (IA) ಅಂಕಗಳ ದಾಖಲಾತಿಯಿಲ್ಲದೆ ಅಂಕಪಟ್ಟಿಯನ್ನು ನೀಡಿರುವ ಬಗ್ಗೆ.

*****

Jenifer M Dsouza , M.Com ವಿದ್ಯಾರ್ಥಿ Reg No: 693236 ಇವರು ಪ್ರಥಮ ಎಂ.ಕಾಂ ಪರೀಕ್ಷೆಯನ್ನು ಮೇ/ಜೂನ್ 2007 ರಲ್ಲಿ ಹಾಗೂ ದ್ವಿತೀಯ ಎಂ.ಕಾಂ.ಪರೀಕ್ಷೆಯನ್ನು ಮೇ/ಜೂನ್ 2008ರಲ್ಲಿ ಹಾಜರಾಗಿ ತೇರ್ಗಡೆ ಹೊಂದಿರುತ್ತಾರೆ.

ಸದರಿ ವಿದ್ಯಾರ್ಥಿಯು ಕೆನಡ ದೇಶಕ್ಕೆ ತೆರಳುತ್ತಿದ್ದು (Transcript) ಪ್ರತಿಲಿಪಿಗಾಗಿ ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸಿ ದಿನಾಂಕ: 07.08.2020 ರಂದು ವಿ.ವಿ ಗೆ ಅರ್ಜಿಸಲ್ಲಿಸಿರುತ್ತಾರೆ, ಈ ವಿದ್ಯಾರ್ಥಿಯ ಅಂಕಪಟ್ಟಿಗಳ ಪರಿಶೀಲನೆ ನಡೆಸಿದಾಗ ಪ್ರಥಮ ಎಂ.ಕಾಂ (IA) ಅಂಕಗಳ ಲಭ್ಯವಿಲ್ಲವೆಂದು, ದ್ವಿತೀಯ ವರ್ಷದ ಎಂ.ಕಾಂ IA ಅಂಕಗಳು ಲಭ್ಯವಿದೆ ಎಂದು ದಾಖಲಾತಿ ವಿಭಾಗದವರು ಹಾಗೂ ಎಂ.ಕಾಂ ವಿಭಾಗದ ಪ್ರವೇಶಾತಿ ವಿಭಾಗದಲ್ಲಿಯೂ ದೃಢೀಕರಿಸಿರುತ್ತಾರೆ.

ದಾಖಲಾತಿ ವಿಭಾಗದಲ್ಲಿ ಪ್ರಥಮ ವರ್ಷದ ಎಂ.ಕಾಂ IA ಅಂಕಗಳಿಲ್ಲದೆ ಇದ್ದರೂ ವಿದ್ಯಾರ್ಥಿಗೆ IA ಅಂಕಗಳೊಂದಿಗೆ ಅಂಕಪಟ್ಟಿ ರವಾನೆಯಾಗಿರುತ್ತದೆ.

ವಿದ್ಯಾರ್ಥಿಯ ಹಿತದೃಷ್ಟಿಯಿಂದ ಅಂಕಪಟ್ಟಿಗಳ ಆಧಾರದ ಮೇಲೆ ಪ್ರತಿಲಿಪಿ (Transcript) ನೀಡಬೇಕೇ ಬೇಡವೇ ಎಂಬುದರ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿ ಚರ್ಚಿಸಿ ನಿರ್ಣಯಕೈಗೊಳ್ಳಲು ವಿಷಯ ಮಂಡಿಸಿದೆ.

**ಚರ್ಚೆ : IA ಅಂಕಗಳನ್ನು ಕುರಿತಂತೆ ವಿದ್ಯಾರ್ಥಿಗಳ ಸಮಸ್ಯೆಗೆ ಸಂಬಂಧಿಸಿದಂತೆ ಈಗಾಗಲೇ ಒಂದು ಸಮಿತಿ ರಚಿಸಲಾಗಿದ್ದು, ಅದರಲ್ಲಿ ಕೆಲವು ಸದಸ್ಯರು ನಿವೃತ್ತಿ ಹೊಂದಿರುತ್ತಾರೆ.**

**ತೀರ್ಮಾನ : ಮೇಲ್ಕಂಡ ಸಮಿತಿಗೆ ಹೊಸದಾಗಿ ಸದಸ್ಯರನ್ನು ನೇಮಿಸಲು ಕ್ರಮಕೈಗೊಂಡು, ಸದರಿ ಸಮಿತಿಯಲ್ಲಿ ಈ ವಿಷಯ ಕುರಿತು ತೀರ್ಮಾನಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಲು ಕುಲಸಚಿವರು (ಪರೀಕ್ಷಾಂಗ) ರವರಿಗೆ ಸೂಚಿಸಲಾಯಿತು.**

## ವಿಷಯ ಸಂಖ್ಯೆ: 56.07

ವಿಷಯ: ವಿನಯ ಕೆ.ಎಂ. ನೋಂದಣಿ ಸಂಖ್ಯೆ 6330545 ಇವರ ಪ್ರಥಮ ಬಿ.ಎ. ಇತಿಹಾಸ ಪತ್ರಿಕೆಯ ಫಲಿತಾಂಶ ಪ್ರಕಟಿಸುವ ಬಗ್ಗೆ.

ಉಲ್ಲೇಖ :
1. ವಿನಯ ಕೆ.ಎಂ. ರವರ ಪತ್ರ ದಿನಾಂಕ: 02.06.2016 (ಅರ್ಜಿ ಇರುವುದಿಲ್ಲ)
2. ಕ.ರಾ.ಮು.ವಿ. :ಪ.ವಿ:ಪಿ.ಜಿ./ಯು.ಜಿ. ದಿನಾಂಕ : 17.06.2016
3. ವಿನಯ ಕೆ.ಎಂ. ರವರ ಪತ್ರ ದಿನಾಂಕ: 27.08.2016 (ಅರ್ಜಿ ಇರುವುದಿಲ್ಲ)
4. ಕ.ರಾ.ಮು.ವಿ.:ಪ.ವಿ:ಬಿ.ಎ. /ಎಸ್.ಆರ್/2015-16 ದಿನಾಂಕ : 01.10.2016.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ವಿನಯ ಕೆ.ಎಂ. ನೋಂದಣಿ ಸಂಖ್ಯೆ 6330545 ಇವರ ಪ್ರಥಮ ಬಿ.ಎ. ಇತಿಹಾಸ ಪತ್ರಿಕೆಯ ಫಲಿತಾಂಶದ ಅಂಕಗಳನ್ನ ನಮೂದಿಸಿ ಅಂತಿಮ ಬಿ.ಎ. ಅಂಕಪಟ್ಟಿಯಲ್ಲಿ ದರ್ಜೆ ನಮೂದಿಸಿ ಅಂಕಪಟ್ಟಿ ನೀಡುವಂತೆ ಕೋರಿರುತ್ತಾರೆ. ಅವರ ಪ್ರಥಮ ಬಿ.ಎ. ಮೇ/ಜೂನ್ 2008ರ ಪರೀಕ್ಷೆಯ ಇತಿಹಾಸ ಪತ್ರಿಕೆಯ 'ಎ ಫಾರಂ' ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವುದಿಲ್ಲ. ಮತ್ತು ಉಡುಪಿಯ ಇನ್ವಿಜಿಲೇಷನ್ ಡೈರಿಯಲ್ಲಿ ನೋಂದಣಿ ಸಂಖ್ಯೆ 7230075 ಮತ್ತು 6330545 ಎಂದು 2 ಸಂಖ್ಯೆಗಳು ಒಂದೇ ಕಾಲಂನಲ್ಲಿ ನಮೂದಾಗಿರುತ್ತದೆ. ಆದರೆ ವಿನಯ ಕೆ.ಎಂ. ರವರು ನೋಂದಣಿ ಸಂಖ್ಯೆ 7230075ನಂ ಮುಂದೆ ಸಹಿ ಮಾಡಿರುತ್ತಾರೆ. ಆದರೆ **ಇನ್ವಿಜಿಲೇಷನ್ ಡೈರಿಯಲ್ಲಿನ ಸಹಿ ಹಾಗೂ ವಿದ್ಯಾರ್ಥಿ ಬರೆದಿರುವ ಪತ್ರಗಳಲ್ಲಿನ ಸಹಿ ಹೊಂದಿಕೆಯಾಗಿರುವುದಿಲ್ಲ.** ಉಡುಪಿ ಪರೀಕ್ಷಾಕೇಂದ್ರದ 'ಎ' ಫಾರಂನಲ್ಲಿ '7230075' ನೋಂದಣಿ ಸಂಖ್ಯೆಗೆ 42 ಅಂ ಕಗಳು ನಮೂದಾಗಿರುತ್ತದೆ. ಮಂಗಳೂರು ಪರೀಕ್ಷಾ ಕೇಂದ್ರದ 'ಎ ಫಾರಂ' ನಲ್ಲಿ '7230075' ನೋಂದಣಿ ಸಂಖ್ಯೆಗೆ 30 ಅಂಕಗಳು ನಮೂದಾಗಿರುತ್ತದೆ. **ಆದರೆ ವಿಶ್ವವಿದ್ಯಾನಿಲಯದ ಲೆಡ್ಜರ್‌ನಲ್ಲಿ 54 ಅಂಕ ಮತ್ತು ಆಂತರಿಕ ನಿಬಂದನೆಯ ಅಂಕ 8 ಒಟ್ಟು 62 ಅಂಕಗಳು ಎಂದು ನಮೂದಾಗಿರುತ್ತದೆ.**

ಕುಲಸಚಿವರು

ಕುಲಪತಿಗಳು

ಆದುದರಿಂದಾಗಿ ಸದರಿ ವಿದ್ಯಾರ್ಥಿಯ ಪ್ರಥಮ ಬಿ.ಎ. ಇತಿಹಾಸ ಪತ್ರಿಕೆಯ ಫಲಿತಾಂಶದ ಅಂಕಗಳನ್ನು ಯಾವ ಆಧಾರದಲ್ಲಿ ನೀಡಬೇಕು ಅಥವಾ ಪುನಃ ಪರೀಕ್ಷೆ ಬರೆಯಬೇಕೆ ಎಂಬುದರ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ನಿರ್ಣಯ ಕೈಗೊಳ್ಳಲು ವಿಷಯ ಮಂಡಿಸಿದೆ.

**ಚರ್ಚೆ : IA ಅಂಕಗಳನ್ನು ಕುರಿತಂತೆ ವಿದ್ಯಾರ್ಥಿಗಳ ಸಮಸ್ಯೆಗೆ ಸಂಬಂಧಿಸಿದಂತೆ ಈಗಾಗಲೇ ಒಂದು ಸಮಿತಿ ರಚಿಸಲಾಗಿದ್ದು, ಅದರಲ್ಲಿ ಕೆಲವು ಸದಸ್ಯರು ನಿವೃತ್ತಿ ಹೊಂದಿರುತ್ತಾರೆ.**

**ತೀರ್ಮಾನ : ಮೇಲ್ಕಂಡ ಸಮಿತಿಗೆ ಹೊಸದಾಗಿ ಸದಸ್ಯರನ್ನು ನೇಮಿಸಲು ಕ್ರಮಕೈಗೊಂಡು, ಸದರಿ ಸಮಿತಿಯಲ್ಲಿ ಈ ವಿಷಯ ಕುರಿತು ತೀರ್ಮಾನಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಲು ಕುಲಸಚಿವರು (ಪರೀಕ್ಷಾಂಗ) ರವರಿಗೆ ಸೂಚಿಸಲಾಯಿತು.**

## ವಿಷಯ ಸಂಖ್ಯೆ: 56.08

ವಿಷಯ: 2020–21 ನೇ ಶೈಕ್ಷಣಿಕ ಸಾಲಿನಲ್ಲಿ ಎಂಬಿಎ ಕಾರ್ಯಕ್ರಮದಲ್ಲಿ ಆಂತರಿಕ ಮೌಲ್ಯಮಾಪನವನ್ನು ಆಂತರಿಕ ನಿಬಂಧನೆಗಳಿಗೆ ಸೀಮಿತಗೊಳಿಸಿರುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2020–21 ನೇ ಸಾಲಿನಲ್ಲಿ ಕೋವಿಡ್–19 ಪರಿಣಾಮವಾಗಿ ಸಂಪರ್ಕ ಕಾರ್ಯಕ್ರಮಗಳನ್ನು ಆನ್‌ಲೈನ್ ಮುಖಾಂತರ ನಡೆಸಲಾಗಿತ್ತು. ಈ ಬಗ್ಗೆ ಯುಜಿಸಿ, ಉನ್ನತ ಶಿಕ್ಷಣ ಪರಿಷತ್ ಹಾಗೂ ಕರ್ನಾಟಕ ಸರ್ಕಾರದ ಮಾರ್ಗದರ್ಶನದ ಮೇರೆಗೆ, ಲಾಕ್‌ಡೌನ್ ಸಂದರ್ಭದಲ್ಲಿ ವಿದ್ಯಾರ್ಥಿಗಳ ಅನ್‌ಲೈನ್ ಮೂಲಕ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸುವಂತೆ ಡೀನ್(ಶೈ) ಅವರ ಸೂಚನೆಯಂತೆ ಆನ್‌ಲೈನ್ ಸಂಪರ್ಕ ಕಾಯಕ್ರಮ ನಡೆಸಲಾಗಿತ್ತು. ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಸೆಮಿನಾರ್ ನಡೆಸಲು ಸಾಧ್ಯವಾಗಲಿಲ್ಲ. ಎಂಬಿಎ ಕಾರ್ಯಕ್ರಮದಲ್ಲಿ ಪ್ರತಿ ಪತ್ರಿಕೆಗೆ 20 ಅಂಕಗಳ ಆಂತರಿಕ ಮೌಲ್ಯಮಾಪನವಿದ್ದು 10 ಅಂಕಗಳಿಗೆ ನಿಬಂಧನೆ ಹಾಗೂ 10 ಅಂಕಗಳಿಗೆ ಸೆಮಿನಾರ್ ನಡೆಸುತಿದ್ದು, ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಅನ್‌ಲೈನ್ ತರಗತಿ ನಡೆಸಲಾದ ವಿದ್ಯಾರ್ಥಿಗಳಿಗೆ 20 ಅಂಕಗಳಿಗೆ ನಿಬಂಧನೆ ನೀಡಿ ಸೆಮಿನಾರ್‌ನಿಂದ ವಿನಾಯಿತಿ ನೀಡಿದೆ. . ಈ ಸಂಬಂಧ ಸಂಪರ್ಕ ಕಾರ್ಯಕ್ರಮ ಕಡತದಲ್ಲಿ ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆಯಲಾಗಿದ್ದು, ಸದರಿ ವಿಷಯವನ್ನ ಶೈಕ್ಷಣಿಕ ಮಂಡಳಿಯ ಅವಗಾಹನೆ ಹಾಗು ಘಟನೋತ್ತರ ಅನುಮೋದನೆಗಾಗಿ ವಿಷಯ ಮಂಡಿಸಿದೆ.

ಪ್ರಸ್ತುತ ಈ ಕೆಳಕಂಡ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ ಈ ಬದಲಾವಣೆ ಮಾಡಲಾಗಿದೆ.
2019–20 ನೇ ಜನವರಿ ಸಾಲಿನಲ್ಲಿ ಪ್ರವೇಶಾತಿ ಪಡೆದ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳು
2019–20 ನೇ ಜುಲೈ ಸಾಲಿನಲ್ಲಿ ಪ್ರವೇಶಾತಿ ಪಡೆದ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳು
2020–21 ನೇ ಜನವರಿ ಸಾಲಿನಲ್ಲಿ ಎರಡನೇ ವರ್ಷಕ್ಕೆ ಪ್ರವೇಶಾತಿ ಪಡೆದ ತೃತೀಯ ಸೆಮಿಸ್ಟರ್ ವಿದ್ಯಾರ್ಥಿಗಳು

**ತೀರ್ಮಾನ : ಕೋವಿಡ್–19 ಪರಿಣಾಮವಾಗಿ ಈ ಶೈಕ್ಷಣಿಕ ಸಾಲಿಗೆ ಆಂತರಿಕ ಮೌಲ್ಯಮಾಪನವನ್ನು ಆಂತರಿಕ ನಿಬಂಧನೆಗಳಿಗೆ ಸೀಮಿತಗೊಳಿಸಲು ಒಪ್ಪಲಾಯಿತು. ಇನ್ನು ಮುಂದೆ ಆನ್‌ಲೈನ್ ಮೂಲಕ ಸೆಮಿನಾರ್ ನಡೆಸುವ ಪ್ರಯತ್ನ ಮಾಡಬೇಕೆಂದು ವಿಭಾಗಕ್ಕೆ ತಿಳಿಸಬೇಕೆಂದು ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ: 56.09

ವಿಷಯ: 2020–21 ನೇ ಸಾಲಿನಲ್ಲಿ ಎಂಬಿಎ ಕಾರ್ಯಕ್ರಮಕ್ಕೆ ಅಭ್ಯರ್ಥಿಗಳಿಗೆ ಪ್ರವೇಶಾತಿ ಪರೀಕ್ಷೆಯಿಂದ ವಿನಾಯಿತಿ ನೀಡಿರುವುದರ ಕುರಿತು ಘಟನೋತ್ತರ ಮಂಜೂರಾತಿ ಪಡೆಯುವುದರ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ದೇಶದಾದ್ಯಂತ ಕೋವಿಡ್–19 ಸಮಸ್ಯೆ ಇರುವ ಕಾರಣ 2020–21 ನೇ ಶೈಕ್ಷಣಿಕ ಸಾಲಿನಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಹಾಗು ರಾಜ್ಯಗಳು ಎಂಬಿಎ ಕಾರ್ಯಕ್ರಮಕ್ಕೆ ಸಾಮಾನ್ಯ ಪ್ರವೇಶಾತಿ ಪರೀಕ್ಷೆಯಿಂದ ವಿನಾಯಿತಿ ನೀಡಿವೆ. ಈ ರದ್ದತಿಯನ್ನು AICTE ಯು ತನ್ನ ಅಧೀನ ಕಾಲೇಜುಗಳು ಹಾಗು

**ಕುಲಸಚಿವರು** **ಕುಲಪತಿಗಳು**

ವಿಶ್ವವಿದ್ಯಾನಿಲಯಗಳಿಗೆ ನೀಡಿರುವ ಪ್ರಸ್ತಾಪನೆ ಆಧರಿಸಿ ಮಾಡಲಾಗಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಕರಾಮುವಿಯಲ್ಲಿ ದಿನಾಂಕ 28.08.2020ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಎಂಬಿಎ ಕಾರ್ಯಕ್ರಮಕ್ಕೆ ಅಭ್ಯರ್ಥಿಗಳಿಗೆ ಪ್ರವೇಶಾತಿ ಪರೀಕ್ಷೆಯಿಂದ ವಿನಾಯಿತಿ ನೀಡಿ ನೇರ ಪ್ರವೇಶಾತಿ ಅವಕಾಶ ಕಲ್ಪಿಸಿದೆ.

ಸದರಿ ವಿಷಯವನ್ನು ಘಟನೋತ್ತರ ಮಂಜೂರಾತಿಗಾಗಿ ಶೈಕ್ಷಣಿಕ ಮಂಡಳಿಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**<u>ತೀರ್ಮಾನ</u> : 2020-21 ನೇ ಸಾಲಿನಲ್ಲಿ ಎಂಬಿಎ ಕಾರ್ಯಕ್ರಮಕ್ಕೆ ಅಭ್ಯರ್ಥಿಗಳಿಗೆ ಪ್ರವೇಶಾತಿ ಪರೀಕ್ಷೆಯಿಂದ ವಿನಾಯಿತಿ ನೀಡಿರುವುದರ ಕುರಿತು ಘಟನೋತ್ತರ ಮಂಜೂರಾತಿ ನೀಡಲು ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 56.10

ವಿಷಯ: ಎಂಬಿಎ ಹಾಗು ನಿರ್ವಹಣಾ ಶಾಸ್ತ್ರ ವಿಭಾಗದ ಡಿಪ್ಲೊಮೊ ಕಾರ್ಯಕ್ರಮಗಳ ಕುರಿತು ಜಾಹೀರಾತು ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಎಂಬಿಎ ಹಾಗೂ ನಿರ್ವಹಣಾ ಶಾಸ್ತ್ರ ವಿಭಾಗದಲ್ಲಿ ಚಾಲ್ತಿಯಲ್ಲಿರುವ ವ್ಯವಹಾರ ಆಡಳಿತ (Business Administration), ಮಾರುಕಟ್ಟೆ ನಿರ್ವಹಣೆ (Marketing Management) ಹಾಗೂ ಮಾನವ ಸಂಪನ್ಮೂಲ ನಿರ್ವಹಣೆ (Human Resource Management) ಡಿಪ್ಲೊಮೊ ಕಾರ್ಯಕ್ರಮಗಳ ಕುರಿತು ಹೆಚ್ಚಿನ ಜಾಹೀರಾತು ನೀಡಿ ಹೆಚ್ಚು ವಿದ್ಯಾರ್ಥಿಗಳನ್ನು ಆಕರ್ಷಿಸಲು ಉದ್ದೇಶಿಸಿ 28.08.2020 ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ರೂ.25,000/- ಗಳನ್ನು ಮುಂಗಡವಾಗಿ ಪಡೆಯಲಾಗಿದೆ. ಈ ಬಾರಿ ಕರ್ನಾಟಕದಾದ್ಯಂತ ಸ್ಥಳೀಯ ಪತ್ರಿಕೆಗಳ ಜೊತೆ ಫೇಸ್ ಬುಕ್, ಗೂಗಲ್ ಮುಂತಾದ ಡಿಜಿಟಲ್ ಮಾಧ್ಯಮದಲ್ಲಿ ಜಾಹೀರಾತು ನೀಡಲಾಗಿದೆ.

ಸದರಿ ವಿಷಯವನ್ನು ಘಟನೋತ್ತರ ಮಂಜೂರಾತಿಗಾಗಿ ಶೈಕ್ಷಣಿಕ ಮಂಡಳಿಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**<u>ತೀರ್ಮಾನ</u> : ಎಂಬಿಎ ಹಾಗು ನಿರ್ವಹಣಾಶಾಸ್ತ್ರ ವಿಭಾಗದ ಡಿಪ್ಲೊಮೊ ಕಾರ್ಯಕ್ರಮಗಳ ಕುರಿತು ರೂ.25,000/- ಗಳನ್ನು ಮುಂಗಡವಾಗಿ ಪಡೆದು ಜಾಹೀರಾತು ನೀಡಿರುವುದನ್ನು ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 56.11

ವಿಷಯ: ಎಂಬಿಎ ಕಾರ್ಯಕ್ರಮದಲ್ಲಿ ಹೊಸದಾಗಿ ವಿಶೇಷ ಪರಿಣಿತಿ ವಿಷಯಗಳನ್ನು ಆರಂಭಿಸಿರುವುದರ ಕುರಿತು ಘಟನೋತ್ತರ ಮಂಜೂರಾತಿ ಪಡೆಯುವುದರ ಬಗ್ಗೆ.

****

ಪ್ರಸಕ್ತ ಸಾಲಿನಿಂದ ಎಂಬಿಎ ಕಾರ್ಯಕ್ರಮದಲ್ಲಿ ಈ ಕೆಳಗಿನ ವಿಶೇಷ ಪರಿಣಿತಿ ವಿಷಯಗಳನ್ನು (ಸ್ಪೆಷಲೈಝೇಷನ್ಸ್) ದಿನಾಂಕ 28.08.2020 ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಆರಂಭಿಸಲಾಗಿದೆ

1. ಆಪರೇಷನ್ಸ್
2. ಟೂರಿಸಂ
3. ಕಾರ್ಪೊರೇಟ್ ಲಾ
4. ಐಟಿ

ಸದರಿ ವಿಷಯವನ್ನು ಘಟನೋತ್ತರ ಮಂಜೂರಾತಿಗಾಗಿ ಶೈಕ್ಷಣಿಕ ಮಂಡಳಿಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**<u>ತೀರ್ಮಾನ</u> : ಎಂಬಿಎ ಕಾರ್ಯಕ್ರಮದಲ್ಲಿ ಹೊಸದಾಗಿ ಮೇಲ್ಕಂಡ ವಿಶೇಷ ಪರಿಣಿತಿ ವಿಷಯಗಳನ್ನು ಆರಂಭಿಸಿರುವುದರ ಕುರಿತು ಘಟನೋತ್ತರ ಮಂಜೂರಾತಿ ನೀಡಲು ಅನುಮೋದಿಸಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ 54.12

ವಿಷಯ: ಖಾಯಂ ಆಗಿ ಅಸ್ತಿತ್ವದಲ್ಲಿರುವಂತೆ ಸಮೀಕರಣ ಸಮಿತಿ (Equivalences Committee) ಯನ್ನು ರಚಿಸುವ ಬಗೆಗೆ.

****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಖಾಯಂ ಆಗಿ ಅಸ್ತಿತ್ವದಲ್ಲಿರುವಂತೆ ಸಮೀಕರಣ ಸಮಿತಿ (Equivalences Committee) ಯನ್ನು ಈ ಕೆಳಕಂಡಂತೆ ರಚಿಸಿ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ.

| | | | |
|---|---|---|---|
| 1. | ಕುಲಸಚಿವರು | – | ಅಧ್ಯಕ್ಷರು |
| 2. | ಡೀನ್ (ಶೈಕ್ಷಣಿಕ) | – | ಸದಸ್ಯರು |
| 3. | ಕುಲಸಚಿವರು (ಪರೀಕ್ಷಾಂಗ) | – | ಸದಸ್ಯರು |
| 4. | ಡೀನ್ (ಅಧ್ಯಯನ ಕೇಂದ್ರಗಳು) | – | ಸದಸ್ಯರು |
| 5. | ನಿರ್ದೇಶಕರು (ಪ್ರವೇಶಾತಿ) | – | ಸದಸ್ಯರು |
| 6. | ನಿರ್ದೇಶಕರು (CIQA) | – | ಸದಸ್ಯರು |
| 7. | ಉಪಕುಲಸಚಿವರು (ಪ್ರವೇಶಾತಿ) | – | ಸಂಚಾಲಕರು |

ಈ ಸಮಿತಿಯು ವಿಶ್ವವಿದ್ಯಾನಿಲಯದಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಈ ಸಂಬಂಧವಾಗಿ ಬೇರೆ ಬೇರೆ ವಿಶ್ವವಿದ್ಯಾನಿಲಯ ಮತ್ತು ನಮ್ಮ ವಿಶ್ವವಿದ್ಯಾನಿಲಯದ Lateral Entry ಅಡಿಯಲ್ಲಿ ಪ್ರವೇಶಾತಿಗೆ ಬರುವ ವಿದ್ಯಾರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆ ಬಗ್ಗೆ ಮತ್ತು ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಿ ಕ್ರಮ ಕೈಗೊಂಡು ವರದಿಯನ್ನು ಸಿದ್ಧಪಡಿಸಿ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ ಸಮೀಕರಣ ಸಮಿತಿ (Equivalences Committee) ಯನ್ನು ಖಾಯಂ ಆಗಿ ರಚಿಸಿ ಅಧಿಸೂಚನೆ ಹೊರಡಿಸಲು ಸದರಿ ವಿಷಯವನ್ನು ಮುಂಬರುವ ಶೈಕ್ಷಣಿಕ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**<u>ತೀರ್ಮಾನ</u> : ಖಾಯಂ ಆಗಿ ಅಸ್ತಿತ್ವದಲ್ಲಿರುವಂತೆ ಮೇಲ್ಕಂಡಂತೆ ಸಮೀಕರಣ ಸಮಿತಿ (Equivalences Committee) ಯನ್ನು ರಚಿಸಲು ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 54.13

ವಿಷಯ: ಡಾ. ಎನ್. ಹರೀಶ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು–06 ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಬಗೆಗೆ.

******

ಡಾ. ಎನ್. ಹರೀಶ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ. ಮೈಸೂರು–06 ಇವರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಲು ದಿನಾಂಕ: 20–02–2020 ರಂದು ಮನವಿಯನ್ನು ಸಲ್ಲಿಸಿದ್ದು, ಹೆಚ್ಚುವರಿ ದಾಖಲೆಗಳೊಂದಿಗೆ ದಿನಾಂಕ: 09–09–2020 ರಂದು ಮುಖ್ಯಸ್ಥರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರಿಗೆ ಸಲ್ಲಿಸಿರುತ್ತಾರೆ. (ಅನುಬಂಧ – 'ಅ' ಮತ್ತು 'ಆ' ನಲ್ಲಿ ಪ್ರತಿ ಲಗತ್ತಿಸಿದೆ.)

ಸದರಿಯವರು ಸಲ್ಲಿಸಿರುವ ಮನವಿಗಳಲ್ಲಿ ನಾವು ಸಂಶೋಧನಾ ಮಾರ್ಗದರ್ಶಕರಾಗಲು ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಅವಕಾಶಗಳನ್ನು ಕಲ್ಪಿಸಿ ಕೊಡಬೇಕೆಂದು ಕೋರಿರುತ್ತಾರೆ.

ಡಾ. ಎನ್. ಹರೀಶ, ರವರ ಪಿಹೆಚ್.ಡಿ ಮಾರ್ಗದರ್ಶಕತ್ವದ ಅರ್ಹತೆಗಾಗಿ ಸಲ್ಲಿಸಿದ್ದ ಅರ್ಜಿಯನ್ನು ದಿನಾಂಕ: 22/23–09–2020 ರಂದು ಜರುಗಿದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿಯಲ್ಲಿ ಪರಾಮರ್ಶಿಸಿ ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (ಪರಿಷ್ಕೃತ ತಿದ್ದುಪಡಿ ಆಧ್ಯಾದೇಶ 2019)ರ ಮಾರ್ಗಸೂಚಿಗಳ ಅನುಗುಣವಾಗಿ ಮಾರ್ಗದರ್ಶಕತ್ವ ಅರ್ಹತಾ ನಿಯಮಾವಳಿಗಳಲ್ಲಿ ಸೂಚಿಸಿರುವ ಮಾನದಂಡಗಳಿಗೆ ಅನುಸಾರವಾಗಿ ಮಾರ್ಗದರ್ಶಕರಾಗಲು ಅರ್ಹರಾಗಿದ್ದಾರೆ ಎಂದು ಸಭೆಯು ನಿರ್ಣಯಿಸಿ ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿರುತ್ತಾರೆ. (ಅನುಬಂಧ – 'ಇ' ನಲ್ಲಿ ಅಧ್ಯಯನ ಮಂಡಳಿ ಸಭೆಯ ನಡಾವಳಿಯನ್ನು ಅಡಕಗೊಳಿಸಲಾಗಿದೆ)

**ಕುಲಸಚಿವರು** **ಕುಲಪತಿಗಳು**

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : ಡಾ. ಎನ್. ಹರೀಶ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು, ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಸಂಬಂಧದ ವಿಷಯವನ್ನು ಶೈಕ್ಷಣಿಕ ಮಂಡಳಿಯು ಅನುಮೋದಿಸಿತು.

## ವಿಷಯ ಸಂಖ್ಯೆ: 56.14

ವಿಷಯ: ಶ್ರೀಮತಿ ಅನೀ ಎ.ಬಿ. ನೋಂದಣಿ ಸಂಖ್ಯೆ 15398 ವಿದ್ಯಾರ್ಥಿನಿಯ ಆಂತರಿಕ ನಿಬಂಧಗಳ ನ್ಯೂನತೆಯ ಬಗ್ಗೆ.

****

1. ಶ್ರೀಮತಿ ಅನೀ ಎ.ಬಿ. ಎಂಬ ವಿದ್ಯಾರ್ಥಿನಿಯ ನೋಂದಣಿ ಸಂಖ್ಯೆ 15398 ಇವರು 2006ರಲ್ಲಿ ಬಿ.ಎ. ಪದವಿಗೆ ಪ್ರವೇಶಾತಿ ಪಡೆದಿರುತ್ತಾರೆ.
2. ಈ ವಿದ್ಯಾರ್ಥಿನಿಯ ಆಂತರಿಕ ನಿಬಂಧಗಳ ದಾಖಲೆವಹಿಯಲ್ಲಿ FCA ಪತ್ರಿಕೆಗೆ 15 ಅಂಕಗಳು ಎಂದು ನಮೂದಿಸಿರುತ್ತಾರೆ. ಆದರೆ ಸದರಿ ವಿದ್ಯಾರ್ಥಿನಿಯು 10 ಅಂಕಗಳ ಆಂತರಿಕ ನಿಬಂಧಗಳ ಆವೃತ್ತಿಗೆ ಒಳಪಟ್ಟಿರುತ್ತಾರೆ.. (ಅನುಬಂಧ –1)
3. ದಿನಾಂಕ: 16.08.2019ರಲ್ಲಿ ದ್ವಿತೀಯ ಮತ್ತು ತೃತೀಯ ವರ್ಷದ ನಕಲು ಅಂಕಪಟ್ಟಿಗಾಗಿ ನಿಗದಿತ ಶುಲ್ಕವನ್ನು ಪಾವತಿಸಿ ಅರ್ಜಿ ಸಲ್ಲಿಸಿರುತ್ತಾರೆ. (ಅನುಬಂಧ –2)
4. ಪ್ರಸ್ತುತ ಆಂತರಿಕ ನಿಬಂಧಗಳ ವಹಿಯಲ್ಲಿ FCA ಪತ್ರಿಕೆಗೆ 15 ಅಂಕಗಳು ಎಂದು ನಮೂದಿಸಿರುತ್ತಾರೆ. ಇದನ್ನು ಸದರಿ ವಿದ್ಯಾರ್ಥಿನಿಗೆ 10 ಅಂಕಗಳ ಆಂತರಿಕ ನಿಬಂದಗಳ ಆವೃತ್ತಿಗೆ ಸರಿಪಡಿಸಲು ಸೂಕ್ತ ಮಾರ್ಗದರ್ಶನ ನೀಡಲು ಕೋರಲಾಗಿದೆ.

ಈ ಹಿನ್ನೆಲೆಯಲ್ಲಿ ಪರೀಕ್ಷಾ ವಿಭಾಗದ ಟಿಪ್ಪಣಿ ದಿನಾಂಕ : 08.10.2020 ರಂದು ಶ್ರೀಮತಿ ಅನೀ ಎ.ಬಿ. ಎಂಬ ವಿದ್ಯಾರ್ಥಿನಿಯ ಆಂತರಿಕ ನಿಬಂಧಗಳಲ್ಲಿ ವ್ಯತ್ಯಾಸವಿರುವ ಅಂಶವನ್ನು ಶೈಕ್ಷಣಿಕ ಮಂಡಳಿಯ ಸಭೆಯ ಅವಗಾಹನೆಗೆ ತರುತ್ತಾ ಸದರಿ ವಿದ್ಯಾರ್ಥಿನಿಗೆ ಯಾವ ಆಂತರಿಕ ನಿಬಂಧಗಳ ಅಂಕವನ್ನು ನೀಡಬೇಕೆಂಬುದರ ಬಗ್ಗೆ ಮಾನ್ಯ ಸಭೆಯ ಸಲಹೆ ಹಾಗೂ ತೀರ್ಮಾನಕ್ಕಾಗಿ ವಿಷಯವನ್ನು ಮಂಡಿಸಿದೆ.

ಚರ್ಚೆ : IA ಅಂಕಗಳನ್ನು ಕುರಿತಂತೆ ವಿದ್ಯಾರ್ಥಿಗಳ ಸಮಸ್ಯೆಗೆ ಸಂಬಂಧಿಸಿದಂತೆ ಈಗಾಗಲೇ ಒಂದು ಸಮಿತಿ ರಚಿಸಲಾಗಿದ್ದು, ಅದರಲ್ಲಿ ಕೆಲವು ಸದಸ್ಯರು ನಿವೃತ್ತಿ ಹೊಂದಿರುತ್ತಾರೆ.

ತೀರ್ಮಾನ : ಮೇಲ್ಕಂಡ ಸಮಿತಿಗೆ ಹೊಸದಾಗಿ ಸದಸ್ಯರನ್ನು ನೇಮಿಸಲು ಕ್ರಮಕೈಗೊಂಡು, ಸದರಿ ಸಮಿತಿಯಲ್ಲಿ ಈ ವಿಷಯ ಕುರಿತು ತೀರ್ಮಾನಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಲು ಕುಲಸಚಿವರು (ಪರೀಕ್ಷಾಂಗ) ರವರಿಗೆ ಸೂಚಿಸಲಾಯಿತು.

## ವಿಷಯ ಸಂಖ್ಯೆ: 54.15

ವಿಷಯ: ಪಿಎಚ್.ಡಿ ಅಧ್ಯಾದೇಶ 2008 ಹಾಗೂ ಅದಕ್ಕಿಂತ ಹಿಂದಿನ ಅಧ್ಯಾದೇಶದ ಪ್ರಕಾರ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾನ್ಯತೆ ಬಿಕ್ಕಟಿನಿಂದ ಉಂಟಾದ ಹೆಚ್ಚುವರಿ ಅವಧಿಯ ಬಗ್ಗೆ.

* * * * *

ಪಿಎಚ್.ಡಿ ಅಧ್ಯಾದೇಶ 2008 ಹಾಗೂ ಅದಕ್ಕಿಂತ ಹಿಂದಿನ ಅಧ್ಯಾದೇಶಗಳಲ್ಲಿ ನೋಂದಣಿಯಾಗಿ ಸಂಶೋಧನೆ ಮಾಡುತ್ತಿರುವ 66 ವಿದ್ಯಾರ್ಥಿಗಳಿಗೆ ಡೀನ್ (ಶೈಕ್ಷಣಿಕ) ವಿಭಾಗದಿಂದ ಹೊರಡಿಸಿರುವ ಸುತ್ತೋಲೆಯಲ್ಲಿ (KSOU/ Dean(Academic) 07/ 2012-13, dated: 01-10-2012) ತಿಳಿಸಿರುವಂತೆ ಪಿಎಚ್.ಡಿ. ಅಧ್ಯಾದೇಶ

ಕುಲಸಚಿವರು

ಕುಲಪತಿಗಳು

2012ರ ಪ್ರಕಾರ ಕೆಲವು ವಿದ್ಯಾರ್ಥಿಗಳು ಕೋರ್ಸ್‌ವರ್ಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಕೆಲವು ವಿದ್ಯಾರ್ಥಿಗಳು ಕೋರ್ಸ್‌ವರ್ಕ್ ಪರೀಕ್ಷೆ ಬರೆಯಲು ಕಾಯುತ್ತಿದ್ದು ಹಾಗೂ ಕೆಲವು ವಿದ್ಯಾರ್ಥಿಗಳು ಮಹಾಪ್ರಬಂಧ ಸಲ್ಲಿಕೆ, ಡಾಕ್ಟರಲ್ ಕಮಿಟಿ ರಚನೆ, ಮೌಖಿಕ ಪರೀಕ್ಷೆ ಕ್ರೋಢೀಕೃತ ವರದಿ ಹಾಗೂ ಅಧಿಸೂಚನೆ ಇತ್ಯಾದಿ ಹಂತದಲ್ಲಿ ಸಂಶೋಧನೆ ಮಾಡುತ್ತಿರುತ್ತಾರೆ. ಪಿಎಚ್.ಡಿ. ಅಧ್ಯಾದೇಶ 2012ರ ಪ್ರಕಾರ ತಾತ್ಕಾಲಿಕ ನೋಂದಣಿಯಾಗಿರುವ 65 ವಿದ್ಯಾರ್ಥಿಗಳು ಕೋರ್ಸ್‌ವರ್ಕ್ ಪರೀಕ್ಷೆಗಾಗಿ ಕಾಯುತ್ತಿದ್ದು, ಈ ಸಂದರ್ಭದಲ್ಲಿ ದಿನಾಂಕ: 16-06-2015 ರಂದು ಯು.ಜಿ.ಸಿ. ಹೊರಡಿಸಿರುವ ಸಾರ್ವಜನಿಕ ಪ್ರಕಟಣೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ನೀಡಿರುವ ಮಾನ್ಯತೆಯನ್ನು ಹಿಂಪಡೆಯಲಾಗಿರುತ್ತದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಎಲ್ಲಾ ಕಾರ್ಯಕ್ರಮಗಳಂತೆ ಪಿಎಚ್.ಡಿ. ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು.

2018-19ನೇ ಸಾಲಿನಲ್ಲಿ ಮಾನ್ಯತೆ ಬಂದ ನಂತರ ತಡೆಹಿಡಿಯಲಾಗಿದ್ದ ಪಿಎಚ್.ಡಿ ಕಾರ್ಯಕ್ರಮವನ್ನು ಮುಂದುವರೆಸಲು ಸಮಿತಿಯೊಂದನ್ನು ರಚಿಸಿ ಸದರಿ ಸಮಿತಿಯು ದಿನಾಂಕ: 23-03-2019ರಂದು ನೀಡಿರುವ ವರದಿಯ ಅನ್ವಯ ಪಿಎಚ್.ಡಿ. ಕಾರ್ಯಕ್ರಮವನ್ನು ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಪವಿ/ಪಿಎಚ್.ಡಿ/69/ 2019-20, ದಿನಾಂಕ: 06-07-2019ರ ಪೂರ್ವಾನ್ವಯ ಜಾರಿಗೆ ಬಂದಂತೆ ವಿದ್ಯಾರ್ಥಿಗಳ ಸಂಶೋಧನೆಯ ಉಳಿದ ಹಂತಗಳನ್ನು ಮುಂದುವರೆಸಲು ಕ್ರಮವಹಿಸಲಾಗಿರುತ್ತದೆ. (ಅನುಬಂಧ 'ಅ').

ಪಿಎಚ್.ಡಿ. ಅಧ್ಯಾದೇಶ 2008 ಮತ್ತು 2012ರ ಪ್ರಕಾರ ಸಂಶೋಧನಾ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್ ಪರೀಕ್ಷೆಯನ್ನು ಅಕ್ಟೋಬರ್ 2019ರಲ್ಲಿ ನಡೆಸಲಾಗಿರುತ್ತದೆ. ತಾತ್ಕಾಲಿಕ ನೋಂದಣಿಯಾಗಿರುವ 65 ವಿದ್ಯಾರ್ಥಿಗಳಿಗೆ ಮಾತ್ರ ನೋಂದಣಿ ಮಾಡಿಸುವ ಸಲುವಾಗಿ ಮಾನ್ಯತೆ ಬಿಕ್ಕಟ್ಟಿನಲ್ಲಿ ಉಂಟಾಗಿದ್ದ ಅವಧಿ ದಿನಾಂಕ: 16-06-2015 ರಿಂದ 06-07-2019 ರವರೆಗಿನ 04 ವರ್ಷ 20 ದಿನಗಳನ್ನು ಗರಿಷ್ಠ ಪರಿಗಣಿಸದ ಅವಧಿ (Period of delay condoned) ಎಂದು ಗಣನೆಗೆ ತೆಗೆದುಕೊಂಡು ಸಂಬಂಧಿಸಿದ ಸಂಶೋಧನಾ ಮಾರ್ಗದರ್ಶಕರ ಸಮರ್ಥನೆಯ ಮೇರೆಗೆ ಸಂಶೋಧನಾ ವಿದ್ಯಾರ್ಥಿಯ ಕಾರ್ಯ ಸ್ಥಗಿತಗೊಂಡ ಅವಧಿಯನ್ನು ಮನ್ನಗೊಳಿಸಲು 54ನೇ ಶೈಕ್ಷಣಿಕ ಮಂಡಳಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಮೇರೆಗೆ ಕಚೇರಿ ಆದೇಶ ಹೊರಡಿಸಲಾಗಿರುತ್ತದೆ. (ಅನುಬಂಧ 'ಆ').

ಅದರಂತೆ, 2008 ಅದಕ್ಕಿಂತ ಹಿಂದಿನ ಅಧ್ಯಾಧೇಶದಲ್ಲಿ ನೋಂದಣಿಯಾಗಿ ಕೋರ್ಸ್‌ವರ್ಕ್ ಪರೀಕ್ಷೆ ಬರೆದಿರುವ, ಕೋರ್ಸ್‌ವರ್ಕ್ ಪರೀಕ್ಷೆಗಾಗಿ ಕಾಯುತ್ತಿರುವ, ಮಹಾಪ್ರಬಂಧ ಸಲ್ಲಿಕೆ, ಡಾಕ್ಟರಲ್ ಕಮಿಟಿ ರಚನೆ, ಮೌಖಿಕ ಪರೀಕ್ಷೆ, ಕ್ರೋಢೀಕೃತ ವರದಿ ಹಾಗೂ ಅಧಿಸೂಚನೆ ಹೊರಡಿಸುವ ಹಂತದಲ್ಲಿರುವ ಒಟ್ಟು 66 ವಿದ್ಯಾರ್ಥಿಗಳಿಗೆ ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಪವಿ/ಪಿಎಚ್.ಡಿ/69/2019-20, ದಿನಾಂಕ: 06-07-2019ರ ಪ್ರಕಾರ ಉಳಿದ ಹಂತಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿರುತ್ತದೆ. ನಿಯಮಾವಳಿ ಪ್ರಕಾರಕ್ಕಿಂತ ಮಾನ್ಯತೆ ಬಿಕ್ಕಟ್ಟಿನಿಂದ ಉಂಟಾಗಿರುವ ಹೆಚ್ಚುವರಿ ಅವಧಿ 04 ವರ್ಷ 20 ದಿನಗಳ ಅವಧಿಯನ್ನು ವಿದ್ಯಾರ್ಥಿಗಳು ತೆಗೆದುಕೊಂಡಿದ್ದಲ್ಲಿ ಮುಂದಿನ ಆಕ್ಷೇಪಣೆ ದೃಷ್ಟಿಯಿಂದ ಸದರಿ ಅವಧಿಯನ್ನು ಪರಿಗಣಿಸದ ಅವಧಿಯೆಂದು ಮನ್ನಾಗೊಳಿಸುವ ಸಂಬಂಧ ಮುಂದಿನ ಶೈಕ್ಷಣಿಕ ಮಂಡಳಿಯಲ್ಲಿ ವಿಷಯ ಮಂಡಿಸಿ ಚರ್ಚೆ ನಿರ್ಣಯಕ್ಕಾಗಿ ಅನುಮತಿ ಕೋರಲಾಗಿದೆ.

<u>ತೀರ್ಮಾನ</u> : **ಪಿಎಚ್.ಡಿ ಅಧ್ಯಾದೇಶ 2008 ಹಾಗೂ ಅದಕ್ಕಿಂತ ಹಿಂದಿನ ಅಧ್ಯಾದೇಶದ ಪ್ರಕಾರ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾನ್ಯತೆ ಬಿಕ್ಕಟಿನಿಂದ ಉಂಟಾದ ಹೆಚ್ಚುವರಿ ಅವಧಿ ನಾಲ್ಕು ವರ್ಷ 20 ದಿನಗಳ ಅವಧಿಯನ್ನು ಗರಿಷ್ಠ ವಿಳಂಬ ಮನ್ನಾ ಅವಧಿ (Period of delay condoned) ಎಂದು ಗಣನೆಗೆ ತೆಗೆದುಕೊಂಡು ಸಂಬಂಧಿಸಿದ ಸಂಶೋಧನಾ ಮಾರ್ಗದರ್ಶಕರ ಸಮರ್ಥನೆಯ ಮೇರೆಗೆ, ಸಂಶೋಧನಾ ವಿದ್ಯಾರ್ಥಿಯು ಕಾರ್ಯ ಸ್ಥಗಿತಗೊಂಡ ಅವಧಿಯನ್ನು ಮನ್ನಾಗೊಳಿಸಲು ಅನುಮೋದಿಸಲಾಯಿತು.**

ಕುಲಸಚಿವರು | ಕುಲಪತಿಗಳು

## ವಿಷಯ ಸಂಖ್ಯೆ: 54.16

ವಿಷಯ: 2020–2021 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಶಿಕ್ಷಣಕ್ರಮಗಳನ್ನು ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಯಲ್ಲಿ ODL Regulations 2020 ಪ್ರಕಾರ ನಡೆಸಲು ಪರಿಷ್ಕೃತ ಆಧ್ಯಾದೇಶವನ್ನು ಹಾಗು ವಿವಿಯಲ್ಲಿ UGC ODL Regulations 2020 ಯನ್ನು ಅಳವಡಿಸಿಕೊಳ್ಳುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2020–2021 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಯಲ್ಲಿ ಪ್ರಾರಂಭಿಸಲು ಉದ್ದೇಶಿಸಿದ್ದು ಈಗಾಗಲೇ 54ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯಲ್ಲಿ ಸದರಿ ವಿಷಯಕ್ಕೆ ಹಾಗೂ Ordinance Governing to Post Graduate Programmes of KSOU under Choice Based Credit System (CBCS)- 2020 ಎಂಬ ಅಧ್ಯಾದೇಶಕ್ಕೆ ಅನುಮೋದನೆ ಪಡೆದಿದ್ದು, ಪ್ರಸ್ತುತ ಯುಜಿಸಿಯು ಹೊಸ ODL ನಿಯಮಾವಳಿ 2020 ಅಧಿಸೂಚನೆ ಹೊರಡಿಸಿದ್ದು, ಅದರಂತೆ ಪರಿಷ್ಕರಿಸಿ Ordinance Governing to Post Graduate Programmes of KSOU under Choice Based Credit System (CBCS)- 2020 ಎಂಬ ಶೀರ್ಷಿಕೆಯಲ್ಲಿ ಪರಿಷ್ಕೃತ ಆಧ್ಯಾದೇಶದ ಪ್ರತಿಯನ್ನು ಸಿದ್ಧಪಡಿಸಲಾಗಿದೆ.

ಯುಜಿಸಿಯು UGC ಕಾಯ್ದೆಯ 1956(3 ರ 1956)ರ ಕ್ಲಾಸ್ (ಜೆ) ಸೆಕ್ಷನ್ 2 ಅಡಿಯಲ್ಲಿ ODL Regulations 2020, ಅಧಿಸೂಚನೆಯನ್ನು ದಿನಾಂಕ: 04–09–2020 ರಂದು ಹೊರಡಿಸಿರುವ ಹಿನ್ನೆಲೆಯಲ್ಲಿ, ಸದರಿ ನಿಯಮಾವಳಿಯನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ.

ಸದರಿ ODL Regulations 2020, ಅಧಿಸೂಚನೆ ಹಾಗೂ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ನ ಆಧ್ಯಾದೇಶದ ಕರಡು ಪ್ರತಿಯನ್ನು ಶೈಕ್ಷಣಿಕ ಮಂಡಳಿ ಅನುಮೋದನೆಗೆ ಮಂಡಿಸಿದೆ.

<u>ತೀರ್ಮಾನ:</u> **1) ವಿಶ್ವವಿದ್ಯಾನಿಲಯದಲ್ಲಿ UGC (ODL & OL) Regulations 2020 ರ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ಅನುಮೋದಿಸಲಾಯಿತು.**

**2) 2021ನೇ ಜನವರಿ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಶಿಕ್ಷಣಕ್ರಮಗಳನ್ನು ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಯಲ್ಲಿ ಆರಂಭಿಸಲು ರಚಿಸಿರುವ "Ordinance Governing to Post Graduate Programmes of KSOU under Choice Based Credit System (CBCS)- 2020" ಎಂಬ ಅಧ್ಯಾದೇಶವನ್ನು UGC (ODL & OL) Regulations 2020 ರ ಅನ್ವಯ ಪರಿಷ್ಕರಿಸಿರುವುದನ್ನು ಅನುಮೋದಿಸಲಾಯಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 54.17

ವಿಷಯ: 2020–2021 ನೇ ಶೈಕ್ಷಣಿಕ ಸಾಲಿನಿಂದ Online Prgrammes ಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ, Ordinance Relating to Online Programmes at Karnataka State Open University ಎಂಬ ಆಧ್ಯಾದೇಶವನ್ನು ODL Regulations 2020 ಪ್ರಕಾರ ಪರಿಷ್ಕರಿಸಿದ್ದು, ಪರಿಷ್ಕೃತ ಅಧ್ಯಾದೇಶದ ಅನುಮೋದನೆಯ ಬಗ್ಗೆ

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2020–2021 ನೇ ಶೈಕ್ಷಣಿಕ ಸಾಲಿನಿಂದ Online Prgrammes ಪ್ರಾರಂಭಿಸಲು ಹಾಗು Ordinance Relating to Online Programmes at Karnataka State Open University-2020 ಯ ಆಧ್ಯಾದೇಶಕ್ಕೆ ಈಗಾಗಲೇ 54ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಪ್ರಸ್ತುತ ಯುಜಿಸಿಯು ಹೊಸ ODL ನಿಯಮಾವಳಿ 2020 ಅಧಿಸೂಚನೆ ಹೊರಡಿಸಿದ್ದು, ಅದರಂತೆ ಪರಿಷ್ಕರಿಸಿ Ordinance Relating to Online Programmes at Karnataka State Open University 2020 ಎಂಬ ಶೀರ್ಷಿಕೆಯಲ್ಲಿ ಪರಿಷ್ಕೃತ ಅಧ್ಯಾದೇಶದ ಪ್ರತಿಯನ್ನು ಸಿದ್ಧಪಡಿಸಲಾಗಿದೆ.

Online Programmes ನ ಆಧ್ಯಾದೇಶದ ಕರಡು ಪ್ರತಿಯನ್ನು ಶೈಕ್ಷಣಿಕ ಮಂಡಳಿ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ : 2021ನೇ ಜನವರಿ ಶೈಕ್ಷಣಿಕ ಸಾಲಿನಿಂದ Online Prgrammes ಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಯಿತು ಹಾಗು ಸಂಬಂಧಪಟ್ಟ ವಿಭಾಗದ ಅಧ್ಯಾಪಕರಿಗೆ ಅಗತ್ಯತೆಯ ಮೇರೆಗೆ ಲ್ಯಾಪ್‌ಟಾಪ್, ಕಂಪ್ಯೂಟರ್ ಹಾಗು ಇತರೇ ಸೌಲಭ್ಯಗಳನ್ನು ನೀಡಲು ತೀರ್ಮಾನಿಸಲಾಯಿತು. "Ordinance Relating to Online Programmes at Karnataka State Open University" ಎಂಬ ಅಧ್ಯಾದೇಶವನ್ನು UGC (ODL & OL) Regulations 2020 ರ ಅನ್ವಯ ಪರಿಷ್ಕರಿಸಿರುವುದನ್ನು ಅನುಮೋದಿಸಲಾಯಿತು ಹಾಗು ವಿಭಾಗದ ಅಧ್ಯಾಪಕರುಗಳಿಗೆ ಅಗತ್ಯತೆ ಮೇರೆಗೆ ಪರಿಕರಗಳನ್ನು (ಕಂಪ್ಯೂಟರ್, ಲ್ಯಾಪ್‌ಟಾಪ್ ಇತರೆ) ಒದಗಿಸಲು ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ: 54.18

ವಿಷಯ: ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (2ನೇ ತಿದ್ದುಪಡಿ ಆಧ್ಯಾದೇಶ 2019)ರ ಅನ್ವಯ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್ ಪ್ರಾರಂಭಿಸಿ, ಅದಕ್ಕೆ ಸಂಭಾವನೆ ನಿಗದಿಪಡಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಪಿಹೆಚ್.ಡಿ ಅಧ್ಯಾದೇಶ 2012 (2ನೇ ತಿದ್ದುಪಡಿ 2019) ಅನುಸಾರ 2018–19ನೇ ಸಾಲಿನ ಪಿಹೆಚ್.ಡಿ ಪ್ರವೇಶಾತಿ ಸಂಬಂಧ ಈಗಾಗಲೇ 125 ಸಂಶೋಧನಾ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಸದರಿ ವಿದ್ಯಾರ್ಥಿಗಳಿಗೆ ಆಯಾ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಮಾರ್ಗದರ್ಶಕರ ಅಡಿಯಲ್ಲಿ ಕೋರ್ಸ್‌ವರ್ಕ್‌ಗಳನ್ನು ಮುಂದಿನ ನವೆಂಬರ್ ಮಾಹೆಯಲ್ಲಿ ನಡೆಸಬೇಕಾಗಿರುತ್ತದೆ. ಸ್ನಾತಕೋತ್ತರ ಕೋರ್ಸುಗಳ ಸಂಪರ್ಕ ಕಾರ್ಯಕ್ರಮಗಳಿಗೆ ಬಾಹ್ಯ ಅಧ್ಯಾಪಕರ ಸಂಭಾವನೆಯನ್ನು ಈಗಾಗಲೇ ರೂ.750/–ಗಳನ್ನು ನೀಡುವ ಬಗ್ಗೆ ಈಗಾಗಲೇ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಅ.ಕೇ)/ಎಂ.ಎ/ಎಂ.ಕಾಂ. ಸಂ.ಕಾ/2019–20 ದಿನಾಂಕ: 29–02–2020ರಲ್ಲಿ ನಮೂದು ಮಾಡಲಾಗಿದೆ. (ಸದರಿ ಆದೇಶದ ಪ್ರತಿಯನ್ನು ಲಗತ್ತಿಸಲಾಗಿದೆ.)

ಸದರಿ ಕೋರ್ಸ್‌ವರ್ಕ್ ಉಪನ್ಯಾಸ ನಡೆಸುವ ಬಾಹ್ಯ ಅಧ್ಯಾಪಕರ ಸಂಭಾವನೆ ಹಾಗು ಕೋರ್ಸ್‌ವರ್ಕ್ ನಡೆಸುವ 6 ತಿಂಗಳ ಕಾಲ ವಿಭಾಗದ ಅಧ್ಯಾಪಕರು ಉಪನ್ಯಾಸವನ್ನು (ಭಾನುವಾರ ಹಾಗು ರಜಾ ದಿನಗಳಂದು) ನಡೆಸಬೇಕಾಗಿದ್ದು, ಅವರಿಗೆ ಸಂಭಾವನೆ ಅಥವಾ ಪರಿಹಾರ ರಜೆ ನೀಡುವ ಸಂಬಂಧ ನಿರ್ಣಯ ಕೈಗೊಳ್ಳಲು 56ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

ಕುಲಸಚಿವರು

ಕುಲಪತಿಗಳು

ತೀರ್ಮಾನ : ಎಂ.ಎ/ಎಂ.ಕಾಂ ಕೋರ್ಸುಗಳ ಸಂಪರ್ಕ ಕಾರ್ಯಕ್ರಮಗಳಿಗೆ ಬಾಹ್ಯ ಅಧ್ಯಾಪಕರ ಸಂಭಾವನೆಯಾಗಿ ಈಗಾಗಲೇ ಪ್ರತಿ ಗಂಟೆಗೆ ರೂ.750/-ಗಳನ್ನು ನೀಡುವ ಬಗ್ಗೆ ಈಗಾಗಲೇ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಅ.ಕೇ)/ಎಂ.ಎ/ಎಂ.ಕಾಂ. ಸಂ.ಕಾ/2019-20 ದಿನಾಂಕ: 29-02-2020ರಲ್ಲಿ ಹೊರಡಿಸಿದ್ದು ಸದರಿ ಆದೇಶವನ್ನು ಎಲ್ಲಾ ಸ್ನಾತಕೋತ್ತರ ಹಾಗು ಪಿಹೆಚ್‌ಡಿ ಕೋರ್ಸ್‌ವರ್ಕ್ ಕಾರ್ಯಕ್ರಮಗಳಿಗೂ ಅನ್ವಯಿಸುವಂತೆ ಪರಿಷ್ಕರಿಸಿ ಆದೇಶ ಹೊರಡಿಸಲು ಕ್ರಮಕೈಗೊಳ್ಳಲು ಡೀನ್ (ಅಧ್ಯಯನ ಕೇಂದ್ರಗಳು) ರವರಿಗೆ ಸೂಚಿಸಲಾಯಿತು.

ಮುಂದುವರೆದು ಕರಾಮುವಿಯ ಅಧ್ಯಾಪಕರು ರಜಾ ದಿನಗಳಂದು ಕನಿಷ್ಠ ಎರಡು ಗಂಟೆಗಳ ಕಾಲ ತರಗತಿಗಳನ್ನು ನಡೆಸಿದರೆ, ಅವರಿಗೆ, ಕರಾಮುವಿ ಪಿಹೆಚ್‌ಡಿ ಅಧ್ಯಾದೇಶ 2012 (2ನೇ ತಿದ್ದುಪಡಿ 2019) ದ ಸೆಕ್ಷನ್ 31.4 ಅನ್ವಯ ಕೋರ್ಸ್ ವರ್ಕ್ ಭತ್ಯೆ ಎಂದು ಪ್ರತಿ ಗಂಟೆಗೆ ರೂ.750/- ಗಳನ್ನು ನೀಡಲು ಅನುಮೋದಿಸಲಾಯಿತು.

## ವಿಷಯ ಸಂಖ್ಯೆ: 56.19

ವಿಷಯ : 2019-20ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದ ಸ್ನಾತಕ, ಸ್ನಾತಕೋತ್ತರ ಪದವಿಗಳ ಪರೀಕ್ಷೆಗಳನ್ನು "ತೆರೆದ ಪುಸ್ತಕ ಪರೀಕ್ಷೆ" (Open Book Exam) ನಡೆಸಲು ಕ್ರಮವಹಿಸಿರುವ ಸಂಬಂಧ ಅನುಸಮರ್ಥನೆಯ ಬಗೆಗೆ.

****

2019-20ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರಥಮ ಮತ್ತು ದ್ವಿತೀಯ ವರ್ಷಕ್ಕೆ ಪ್ರವೇಶಾತಿ ಪಡೆದ ಬಿ.ಎ/ಬಿ.ಕಾಂ ಪದವಿಯ ವಿದ್ಯಾರ್ಥಿಗಳಿಗೆ, ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಎಂ.ಎ/ಎಂ.ಕಾಂ ಪದವಿಯ ವಿದ್ಯಾರ್ಥಿಗಳಿಗೆ, ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ಎಂ.ಎಸ್ಸಿ ಪದವಿಯ ವಿದ್ಯಾರ್ಥಿಗಳಿಗೆ ಹಾಗೂ ದ್ವಿತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ಎಂ.ಬಿ.ಎ ಪದವಿಯ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ 55ನೇ ಶೈಕ್ಷಣಿಕ ಮಂಡಳಿ ಸಾಮನ್ಯ ಸಭೆಯ ತೀರ್ಮಾನದಂತೆ ಪರೀಕ್ಷಾ ಮಾರ್ಗಸೂಚಿ ಸಭೆಯ ಸಲಹಾ ಸಮಿತಿ ಸಭಾ ನಡಾವಳಿಯನ್ವಯ ಆದೇಶ ಸಂಖ್ಯೆ:ಕರಾಮುವಿ/ಪವಿ/ಸಾ.ಶಾ-07/ಶೈ.ಮಂ ಮತ್ತು ವ್ಯ.ಮಂ-05/2020-21 ದಿನಾಂಕ: 31.08.2020ರ ಆದೇಶದ ಮೇರೆಗೆ 2019-20ನೇ ಶೈಕ್ಷಣಿಕ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರಥಮ ಮತ್ತು ದ್ವಿತೀಯ ವರ್ಷಕ್ಕೆ ಪ್ರವೇಶಾತಿ ಪಡೆದ ಬಿ.ಎ/ಬಿ.ಕಾಂ ಪದವಿಯ ವಿದ್ಯಾರ್ಥಿಗಳಿಗೆ, ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಎಂ.ಎ/ಎಂ.ಕಾಂ ಪದವಿಯ ವಿದ್ಯಾರ್ಥಿಗಳಿಗೆ, ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ಎಂ.ಎಸ್ಸಿ ಪದವಿಯ ವಿದ್ಯಾರ್ಥಿಗಳಿಗೆ ಹಾಗೂ ದ್ವಿತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ಎಂ.ಬಿ.ಎ ಪದವಿಯ ವಿದ್ಯಾರ್ಥಿಗಳಿಗೆ ಎಂ.ಹೆಚ್.ಆರ್.ಡಿ-ಯುಜಿಸಿ ಹಾಗೂ ರಾಜ್ಯ ಸರ್ಕಾರಗಳ ನಿರ್ದೇಶನದ ಅನ್ವಯ "ತೆರೆದ ಪುಸ್ತಕ ಪರೀಕ್ಷೆ" (Open Book Exam) ನಡೆಸಲು ದಿನಾಂಕ: 07.09.2020 ರಂದು (ಸಂಖ್ಯೆ: ಕರಾಮುವಿ/ಪವಿ/5.1/ಯುಜಿ.ಪಿಜಿ/ತೆ.ಪು.ಪ/1382020-21. ದಿನಾಂಕ: 07.09.2020) ಪರೀಕ್ಷಾ ಶುಲ್ಕ ಪಾವತಿಸಲು ಪರಿಷ್ಕೃತ ಅಧಿಸೂಚನೆ ಹೊರಡಿಸಲಾಗಿರುತ್ತದೆ.(ಪ್ರತಿ ಲಗತ್ತಿಸಿದೆ)

ಮುಂದುವರೆದಂತೆ ದಿನಾಂಕ: 18.08.2020ರಂದು ನಡೆದ "ಪರೀಕ್ಷಾ ಮಾರ್ಗಸೂಚಿ ಸಲಹಾ ಸಮಿತಿ"ಯ ಸಲಹೆಗಳನ್ನು ಹಂತಹಂತವಾಗಿ ಅನುಷ್ಠಾನಕ್ಕೆ ತೆಗೆದುಕೊಳ್ಳಲಾಗಿದೆ. ಸದರಿ ಸಮಿತಿಯ ಸಭಾ ನಡಾವಳಿಯನ್ನು ಮತ್ತು ಸಲಹೆಗಳನ್ನು ಪೂರ್ಣ ನೆಲೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಅನುಸಮರ್ಥನೆ ಕೋರಿ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಿದೆ.

**ತೀರ್ಮಾನ : ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2019-20ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದ ಸ್ನಾತಕ, ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳ ಪರೀಕ್ಷೆಗಳನ್ನು "ತೆರೆದ ಪುಸ್ತಕ ಪರೀಕ್ಷೆ" (Open Book Exam) ನಡೆಸಲು ಕ್ರಮವಹಿಸಿರುವ ಸಂಬಂಧ ಅನುಸಮರ್ಥನೆ ನೀಡಲಾಯಿತು ಹಾಗು 'ಪರೀಕ್ಷಾ ಮಾರ್ಗಸೂಚಿ ಸಲಹಾ ಸಮಿತಿ' ಯ ಸಲಹೆಗಳನ್ನು ಅನುಷ್ಠಾನಗೊಳಿಸುತ್ತಿರುವ ಕ್ರಮಕ್ಕೆ ಅನುಮೋದನೆ ನೀಡಲಾಯಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ : 56.20

ವಿಷಯ : Online ಶಿಕ್ಷಣ ಕಾರ್ಯಕ್ರಮಗಳಿಗೆ Learning Mangement System (ಕಲಿಕಾ ನಿರ್ವಹಣೆ ವ್ಯವಸ್ಥೆ) ಅಳವಡಿಸಿಕೊಳ್ಳಲು "Expression Of Interest" ಕರೆಯುವ ಬಗ್ಗೆ.

******

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು (UGC) ಇತ್ತೀಚೆಗೆ UGC-ODL and OL Regulation-2020 ಯನ್ನು ಗೆಜೆಟ್ ಮೂಲಕ ಪ್ರಕಟಿಸಿದ್ದು, ಅದರನ್ವಯ ವಿಶ್ವವಿದ್ಯಾನಿಲಯಗಳು Online ಶಿಕ್ಷಣ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಉತ್ತೇಜಿಸಿದೆ ಹಾಗೂ Online ಶಿಕ್ಷಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರೂಪಿಸಿರುತ್ತದೆ.

ಈ ನಿಯಮಗಳನ್ವಯ Online ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲು ನಿರ್ದಿಷ್ಟ ರೂಪುರೇಷೆಗಳನ್ನು ನೀಡಿರುತ್ತಾರೆ. ಇವುಗಳನ್ವಯ Online ಶಿಕ್ಷಣ ಕಾರ್ಯಕ್ರಮಗಳನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯಗಳು UGC ಯ SWAYAM Learning Mangement System (ಕಲಿಕಾ ನಿರ್ವಹಣಾ ವ್ಯವಸ್ಥೆ) ಮೂಲಕ Online ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾಗಿರುತ್ತದೆ. ಮುಂದುವರೆದು, ವಿಶ್ವವಿದ್ಯಾನಿಲಯಗಳು ತಮ್ಮದೇ ಆದ SWAYAM ಅನ್ನು ಹೋಲುವ ಇತರೆ ವ್ಯವಸ್ಥೆಗಳನ್ನು ಅಭಿವೃದ್ಧಿ ಪಡಿಸಿ, ಅವುಗಳ ಮೂಲಕ Online Course ಗಳನ್ನು ನಡೆಸಬಹುದೆಂದಿರುತ್ತದೆ. ಈ ನಿಟ್ಟಿನಲ್ಲಿ ಕೆಲವು ಖಾಸಗಿ ಸಂಸ್ಥೆಗಳು NON-SWAYAM ಕಲಿಕಾ ನಿರ್ವಹಣಾ ವ್ಯವಸ್ಥೆ ಅಭಿವೃದ್ಧಿ ಪಡಿಸಿದ್ದು, UGCಯಿಂದ ಮಾನ್ಯತೆಯನ್ನು ಹೊಂದಿರುತ್ತವೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರಸ್ತುತ ವರ್ಷದಿಂದ Online ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಿರುವುದರಿಂದ, ಈ ಕಾರ್ಯಕ್ರಮಗಳ Programme Project Report (PPR) ಗಳನ್ನು UGC Websiteನಲ್ಲಿ upload ಮಾಡಬೇಕಾಗಿರುತ್ತದೆ. UGC Websiteಗೆ ಇತರೆ ಕಲಿಕಾ ಸಾಮಗ್ರಿಗಳ ಕುರಿತು ವಿಶ್ವವಿದ್ಯಾನಿಲಯಗಳ ಹಾಗೂ E-content ಕೂಡ upload ಮಾಡಬೇಕಾಗಿರುತ್ತದೆ. ಮೇಲೆ ಹೇಳಿರುವಂತೆ ಕೆಲವು ಖಾಸಗಿ ಸಂಸ್ಥೆಗಳು E-content development ಅಭಿವೃದ್ಧಿ ಪಡಿಸುವಲ್ಲಿ ನುರಿತರಾಗಿದ್ದು ಹಾಗೂ ಕಲಿಕಾ ನಿರ್ವಹಣಾ ವ್ಯವಸ್ಥೆಯನ್ನು ಕೂಡ ನಿರ್ವಹಿಸಲು ಸಮರ್ಥವಾಗಿರುತ್ತವೆ. UGC ಕೂಡ ಈ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ನಡೆಸಬಹುದೆಂದು ನಿರ್ದೇಶನ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮುಂದಿನ ದಿನಗಳಲ್ಲಿ ಕಲಿಕಾ ನಿರ್ವಹಣಾ ವ್ಯವಸ್ಥೆ ಹಾಗೂ E-content ಅಭಿವೃದ್ಧಿ ಪಡಿಸಲು ಆಸಕ್ತ ಸಂಸ್ಥೆಗಳಿಂದ "Expression of Interest" ಕರೆಯುವ ಸಂಬಂಧ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಶೈಕ್ಷಣಿಕ ಮಂಡಳಿ ಸಭೆಯ ಮುಂದೆ ಮಂಡಿಸಿದೆ.

**<u>ತೀರ್ಮಾನ</u> : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮುಂದಿನ ದಿನಗಳಲ್ಲಿ ಕಲಿಕಾ ನಿರ್ವಹಣಾ ವ್ಯವಸ್ಥೆ ಹಾಗೂ E-content ಅಭಿವೃದ್ಧಿಪಡಿಸಲು ಆಸಕ್ತ ಸಂಸ್ಥೆಗಳಿಂದ "Expression of Interest" ಕರೆಯುವ ಸಂಬಂಧ ವಿಷಯವನ್ನು ಸಭೆಯಲ್ಲಿ ಒಪ್ಪಲಾಯಿತು. PPR ಗಳನ್ನು ದಿನಾಂಕ: 15–10–2020 ರೊಳಗೆ upload ಮಾಡಬೇಕಾಗಿರುವುದರಿಂದ ಶೀಘ್ರವಾಗಿ ಕ್ರಮವಹಿಸಲು ಸೂಚಿಸಲಾಯಿತು.**

ಕುಲಸಚಿವರು                                                                 ಕುಲಪತಿಗಳು

## ವಿಷಯ ಸಂಖ್ಯೆ : 56.21

ವಿಷಯ : ನೂತನ ಶಿಕ್ಷಣಕಾರ್ಯಕ್ರಮಗಳನ್ನು ಆರಂಭಿಸಲು UGC ಗೆ PPR ಗಳನ್ನು ಸಲ್ಲಿಸುವ ಬಗ್ಗೆ.

****

2021ನೇ ಜನವರಿ ಸಾಲಿನಿಂದ ನೂತನ ಕಾರ್ಯಕ್ರಮಗಳನ್ನು ಆರಂಭಿಸಲು ಯುಜಿಸಿಯು ಅರ್ಜಿ ಆಹ್ವಾನಿಸಿದ್ದು PPR ಗಳನ್ನು ದಿನಾಂಕ: 15-10-2020 ರೊಳಗೆ upload ಮಾಡಬೇಕಾಗಿರುತ್ತದೆ. ಈ ಹಿಂದೆ PPR ಗಳನ್ನು ಸಲ್ಲಿಸಿದ್ದು ಯುಜಿಸಿಯವರು UGC (ODL & OL) Regulations 2020 ರ ಅನ್ವಯ ಮರುಸಲ್ಲಿಸುವಂತೆ ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಸಲ್ಲಿಸಿದ್ದ PPR ಗಳನ್ನು UGC (ODL & OL) Regulations 2020 ರ ಅನ್ವಯ ಪರಿಷ್ಕರಿಸಿ ಮತ್ತು ನೂತನವಾಗಿ ಆರಂಭಿಸಲು ಉದ್ದೇಶಿಸಿರುವ ಈ ಕೆಳಕಂಡ ಶಿಕ್ಷಣಕ್ರಮಗಳಿಗೆ (ODL Mode ಮತ್ತು OL Mode) PPR ಗಳನ್ನು ಸಿದ್ಧಪಡಿಸಿದೆ.

Proposal to commence the following new courses in various departments of the University:

| Sl. No. | Name of the New Programmes Proposed in Open and Distance Learning mode |
|---|---|
| 1. | Bachelor of Science (B.Sc.) |
| 2. | Bachelor of Business Administration (B.B.A.) |
| 3. | Bachelor of Computer Application (B.C.A.) |
| 4. | Bachelor of Science in Information Technology (B.Sc.I.T.) |
| 5. | Bachelor of Science in Human Development (B.Sc. Human Developmen) |
| 5. | Master of Arts in Education (M.A.Education) |
| 6. | Master of Arts in Telugu (M.A. Telugu) |
| 7. | Master of Science in Information Technology (M.Sc.I.T.) |
| 8. | Master of Science in Botany (M.Sc. Botany) |
| 9. | Master of Science in Zoology (M.Sc. Zoology) |
| 10. | Master of Science in Food Science and Nutrition (M.Sc. Food Science and Nutrition) |

| Sl. No. | Name of the New Programmes Proposed in Online mode |
|---|---|
| 1. | Master of Commerce (M.Com) |
| 2. | Master of Business Administration (M.B.A.) |
| 3. | Master of Arts in Economics (M.A. Economics) |
| 4. | Master of Science in Information Technology (MSc.I.T.) |
| 5. | Master of Science in Computer Science (M.Sc. Computer Science) |
| 6. | Master of Arts in English (M.A English) |
| 7. | Master of Arts in Hindi (M.A Hindi) |
| 8. | Master of Arts in Kannada (M.A Kannada) |

<u>ತೀರ್ಮಾನ</u> : ಆನ್‌ಲೈನ್ ಮತ್ತು ದೂರ ಶಿಕ್ಷಣಕ್ರಮದಲ್ಲಿ ಆರಂಭಿಸಲು ಉದ್ದೇಶಿಸಿರುವ ನೂತನ ಕಾರ್ಯಕ್ರಮಗಳ PPR ಗಳನ್ನು ಅನುಮೋದಿಸಲಾಯಿತು. ಹಾಗು ಈ ಮೇಲೆ ಕಂಡ ಕಾರ್ಯಕ್ರಮಗಳನ್ನು ಆರಂಭಿಸಲು ಅನುಮೋದನೆ ನೀಡಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ : 56.22

ವಿಷಯ: ಕರಾಮುವಿಯಲ್ಲಿ ಸ್ಕೂಲ್ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ

****

ಕರಾಮುವಿಯಲ್ಲಿ ನೇಮಕವಾಗಿದ್ದ ಸ್ಕೂಲ್ ನಿರ್ದೇಶಕರು ವಯೋ ನಿವೃತ್ತಿ ಹೊಂದಿದ್ದು ಯುಜಿಸಿ ಗೆ ಹೊಸ PPR ಸಲ್ಲಿಸುವ ಸಂಬಂಧ ಸ್ಕೂಲ್ ನಿರ್ದೇಶಕರ ನೇಮಕಾತಿ ಪತ್ರವನ್ನು Upload ಮಾಡಬೇಕಾಗಿದೆ. UGC ಯು ODL Programmes and Online Programmes Regulations-2020 ಅನ್ನು ದಿನಾಂಕ: 04-09-2020 ರಂದು ಪ್ರಕಟಿಸಿದ್ದು (ಪ್ರತಿ ಲಗತ್ತಿಸಿದೆ), ಅದರ Part 3(8.1) ಅನ್ವಯ ಸ್ಕೂಲ್ ನಿರ್ದೇಶಕರು ಕನಿಷ್ಠ ಸಹ ಪ್ರಾಧ್ಯಾಪಕರಾಗಿರಬೇಕು ಎಂಬುದನ್ನು ಹಾಗು ಕರಾಮುವಿಯಲ್ಲಿ Statutes Governing to Establishment of School ಅನ್ನು ಸಿದ್ದಪಡಿಸಿದ್ದು, ಇದು ಸರ್ಕಾರದಿಂದ ಅಂಕಿತವಾಗಿರುವುದಿಲ್ಲವೆಂಬುದನ್ನು ಗಮನಕ್ಕೆ ತರಲಾಗಿದೆ.

ಈ ಹಿನ್ನೆಲೆಯಲ್ಲಿ ಸ್ಕೂಲ್ ನಿರ್ದೇಶಕರನ್ನು ನೇಮಕ ಮಾಡುವ ಸಂಬಂಧ ಜೇಷ್ಠತಾ ಪಟ್ಟಿಯನ್ನು ಅವಗಾಹನೆಗೆ ಲಗತ್ತಿಸಿದೆ.

**School of Humanities**

| Sl. No. | NAME | DEPT. | DESIGNATION |
|---|---|---|---|
| 1 | Dr. Ashok Kamble | HINDI | Professor |
| 2 | Dr. Rangaswamy A | KANNADA | Professor |
| 3 | Smt. Balquees Banu M | URDU | Associate Prof. |
| 4 | Dr. Ramanatham Naidu M | TELUGU | Associate Prof. |
| 5 | Dr. Naganna D | KANNADA | Associate Prof. |
| 6 | Dr. Kavitha Rai | KANNADA | Associate Prof. |

**School of Social Science**

| Sl. No. | NAME | DEPT. | DESIGNATION |
|---|---|---|---|
| 1 | Dr. Ramananda M S | ECONOMICS | Associate Prof. |
| 2 | Dr. Thejasvi Naviloor | MASS COMM. AND JOURNALISM | Associate Prof. |
| 3 | Dr. Shankaranaranappa | POL.SCIENCE | Associate Prof. |

**School of Commerce & Management**

| Sl. No. | NAME | DEPT. | DESIGNATION |
|---|---|---|---|
| 1 | Dr. Mahadevamurthy C | MANAGEMENT | Associate Prof. |

**School of Education**

| Sl. No. | NAME | DEPT. | DESIGNATION |
|---|---|---|---|
| 1 | Dr. Lakshmi N. | EDUCATION | Associate Prof. |

**School of Science**

| Sl. No. | NAME | DEPT. | DESIGNATION |
|---|---|---|---|
| 1 | All Teachers Assistant Prof | | |

ಕುಲಸಚಿವರು ಕುಲಪತಿಗಳು

ಚರ್ಚೆ : ಕರಾಮುವಿಯಲ್ಲಿ ಸ್ಕೂಲ್‌ಗಳಿಗೆ ಸಂಬಂಧಿಸಿದಂತೆ ಪರಿನಿಯಮಾವಳಿಗಳು ರಚನೆಯ ಹಂತದಲ್ಲಿರುವುದನ್ನು ಹಾಗು ಪ್ರಸ್ತುತ, PPR ಗಳನ್ನು ದಿನಾಂಕ: 15-10-2020 ರೊಳಗೆ upload ಮಾಡಲು ಸ್ಕೂಲ್ ನಿರ್ದೇಶಕರ ನೇಮಕಾತಿ ಪತ್ರಗಳನ್ನು upload ಮಾಡಬೇಕಾಗಿರುವುದನ್ನು ಗಮನಿಸಲಾಯಿತು.

ತೀರ್ಮಾನ : ಪ್ರಭಾರ ಸ್ಕೂಲ್ ನಿರ್ದೇಶಕರನ್ನು ನೇಮಕಾತಿ ಮಾಡುವಂತೆ ಮಾನ್ಯ ಕುಲಪತಿಗಳನ್ನು ಕೋರಲಾಯಿತು.

## ವಿಷಯ ಸಂಖ್ಯೆ : 56.23

ವಿಷಯ : ವಿವಿಧ ಶಿಕ್ಷಣಕ್ರಮಗಳ ಶುಲ್ಕದ ಸಂಬಂಧದಲ್ಲಿನ ಆಧ್ಯಾದೇಶಗಳಿಗೆ (KSOU Ordinance relating to the prescription of Fee – 2017 & KSOU Ordinance relating to the prescription of Fee – 2018) ತಿದ್ದುಪಡಿ ತರುವ ಕುರಿತು.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು UGC-Open Distance Learning (ODL) Guidelines 2017) ರನ್ವಯ ಕಾರ್ಯ ನಿರ್ವಹಿಸುತ್ತಿದ್ದು, ಉನ್ನತ ಶಿಕ್ಷಣವನ್ನು ತನ್ನ ಪ್ರಾದೇಶಿಕ ಕೇಂದ್ರಗಳು ಮತ್ತು ಗುರುತಿಸಲ್ಪಟ್ಟಿರುವ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಉನ್ನತ ಶಿಕ್ಷಣವನ್ನು ಪ್ರಸರಿಸುತ್ತಿದೆ.

ವಿಶ್ವವಿದ್ಯಾನಿಲಯವು ನೀಡುತ್ತಿರುವ ಯುಜಿ/ ಪಿಜಿ ಶಿಕ್ಷಣಕ್ರಮಗಳ ರೂಪರೇಷಗಳ ಕುರಿತು ಪ್ರತ್ಯೇಕ ಆಧ್ಯಾದೇಶಗಳನ್ನು ರಚಿಸಿಕೊಂಡಿದ್ದು, ಅವುಗಳು ಸರ್ಕಾರದ ಅನುಮತಿಯೊಂದಿಗೆ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿರುತ್ತವೆ.

ಅವುಗಳಲ್ಲಿ ಶಿಕ್ಷಣಕ್ರಮಗಳ ಪ್ರವೇಶಾತಿಗೆ ನಿಗದಿಯಾಗುವ ಸಂಬಂಧದಲ್ಲಿ KSOU Ordinance relating to the prescription of Fee – 2017 & KSOU Ordinance relating to the prescription of Fee – 2018 ಆಧ್ಯಾದೇಶಗಳು ಒಳಗೊಂಡಿರುತ್ತವೆ.

ಪ್ರವೇಶಾತಿ ಸಂಬಂಧದಲ್ಲಿ ನಿಗದಿಯಾಗಿರುವ ಶುಲ್ಕಗಳಲ್ಲಿ ಆಯಾ ಶಿಕ್ಷಣಕ್ರಮಗಳಿಗೆ ಪ್ರೋಸೆಸಿಂಗ್ ಶುಲ್ಕವು ಒಳಗೊಂಡಂತ ವಿವರ ಕೆಳಕಂಡಂತಿದೆ-

| Name of the Programs | BA/B.com/ MA/M.com/PG Dip./Dip./ Certificate | M.Sc/ B.lib.I.Sc/ M.lib.I.Sc |
|---|---|---|
| Processing Fee | 300/- each | 500/- each |

ಯುಜಿಸಿ – ಒಡಿಎಲ್ ಮಾರ್ಗಸೂಚಿಯನ್ವಯ ವಿಶ್ವವಿದ್ಯಾನಿಲಯವು ರಾಜ್ಯದಲ್ಲಿ ಗುರುತಿಸಿರುವ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ತನ್ನ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂಬಂಧದಲ್ಲಿ ಸಮಾಲೋಚನೆ, ವಿವರ ನೀಡುವುದು, ಉನ್ನತ ಶಿಕ್ಷಣದ ಅರಿವು ಮೂಡಿಸುವುದು, ವಿವಿ ನಿಲಯವು ಸೂಚಿಸುವ ಮತ್ತಿತರ ಶೈಕ್ಷಣಿಕ ಸೇವೆಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಜವಾಬ್ದಾರಿಯನ್ನು ವಹಿಸಲಾಗಿರುತ್ತದೆ. ಈ ಸಂಬಂಧದಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಉತ್ತೇಜಿಸುವ ಕ್ರಮವಾಗಿ ಪ್ರೋತ್ಸಾಹ ಧನವನ್ನು ನೀಡಲು ವಿವಿ ನಿಲಯವು ನಿಶ್ಚಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರವೇಶಾತಿ ಪ್ರೋಸೆಸಿಂಗ್ ಶುಲ್ಕದಲ್ಲಿ ಮಾತ್ರ ರೂ:100/-ಗಳನ್ನು ಹೆಚ್ಚಿಸಲು ಉದ್ದೇಶಿಸಿ, ಯುಜಿಸಿಯ ನಿರ್ದೇಶಾನುಸಾರ 2020-21ರ ಜುಲೈ ಆವೃತ್ತಿಯ ಪ್ರವೇಶಾತಿಯು ಸೆಪ್ಟಂಬರ್ ಮಾಹೆಯಿಂದ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಮಂಡಳಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಪ್ರವೇಶಾತಿ ಪ್ರೋಸೆಸಿಂಗ್ ಶುಲ್ಕವನ್ನು ಪರಿಷ್ಕೃತ ದರದಲ್ಲಿ ಪ್ರವೇಶಾತಿ ಪ್ರಕಟಣೆಯನ್ನು ಹೊರಡಿಸಲು ಮಾನ್ಯ ಕುಲಪತಿಗಳು ದಿನಾಂಕ : 20.08.2020ರಂದು ಅನುಮೋದನೆ ನೀಡಿರುತ್ತಾರೆ. ಅದರಂತೆ ರಾಜ್ಯಾದ್ಯಂತ ಪ್ರವೇಶಾತಿ ನಡೆಯುತ್ತಿದೆ. ಪ್ರಸ್ತುತ ಪರಿಷ್ಕೃತ ದರ ಕೆಳಕಂಡಂತಿದೆ-

ಕುಲಸಚಿವರು

ಕುಲಪತಿಗಳು

| Name of the Programs | BA/B.com/ MA/M.com/PG Dip./Dip./ Certificate | M.Sc/ B.lib.I.Sc/ M.lib.I.Sc |
|---|---|---|
| Processing Fee | 400/- each | 600/- each |

1. ಮುಂದುವರೆದು, ವಿಶ್ವವಿದ್ಯಾನಿಲಯವು ಅರ್ಹ ಪಜಾ/ಪಪ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯಾಗುವ ಷರತ್ತಿಗೊಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ನೀಡುತ್ತಿದ್ದು, ಶುಲ್ಕ ಮರುಭರಿಕೆಯು ಸುಲಲಿತವಾಗಿ ಆಗುವ ದೃಷ್ಟಿಯಿಂದ ಸಮಾಜ ಕಲ್ಯಾಣ ಇಲಾಖೆಯಲ್ಲಿನ ತಂತ್ರಾಂಶ ನಿರ್ವಹಣೆಯ ನಿರೂಪಕರ ಸಲಹೆಯಂತೆ ಸರ್ಕಾರವು ಸಿದ್ದಪಡಿಸಿರುವ ಎಸ್ಎಸ್‌ಪೋರ್ಟಲ್‌ನಲ್ಲಿರುವ ವಿವಿಧ ಶುಲ್ಕಗಳ ಶೀರ್ಷಿಕೆಯನ್ನು ಆಧರಿಸಿ ಅಧಿಕಾರಿಗಳ ಸಭೆಯಲ್ಲಿನ ತೀರ್ಮಾದನ್ವಯ ನಮ್ಮ ವಿಶ್ವವಿದ್ಯಾನಿಲಯದ ಪ್ರವೇಶಾತಿ ಶುಲ್ಕಗಳ ಶೀರ್ಷಿಕೆಯನ್ನು ಕೆಳಕಂಡಂತೆ ತಿದ್ದುಪಡಿ ಮಾಡಿಕೊಳ್ಳಲಾಗಿರುತ್ತದೆ–

| ಕ್ರ.ಸಂ. | ವಿವಿ ನಿಲಯದಲ್ಲಿನ ಚಾಲ್ತಿಯಲ್ಲಿದ್ದ ಶುಲ್ಕದ ಶೀರ್ಷಿಕೆ | ಸರ್ಕಾರದ ಪೋರ್ಟಲ್ ನಲ್ಲಿರುವ ಶುಲ್ಕದ ಶೀರ್ಷಿಕೆ | ತಿದ್ದುಪಡಿ ಮಾಡಿಕೊಂಡಿರುವ ಶುಲ್ಕದ ಶೀರ್ಷಿಕೆ |
|---|---|---|---|
| 1 | Processing Fee | Admission Fee | Admission (Processing) Fee |
| 2 | Skill Development Fee | Development Fee | Development (Skill) Fee |

2. ದ್ವಿತೀಯ ಬಿ.ಎ. ಪದವಿ ತರಗತಿಯ ಬೋಧನಾ ಶುಲ್ಕವು ಅಧ್ಯಾದೇಶದಲ್ಲಿ ರೂ : 3200/– ಎಂದಿರುತ್ತದೆ. ಪ್ರಥಮ ಬಿ.ಎ. ತರಗತಿಯ ಬೋಧನಾ ಶುಲ್ಕವು ರೂ : 3400/– ಆಗಿರುತ್ತದೆ. ಎರಡೂ ಸಾಲುಗಳಲ್ಲಿ ಎರಡು ಭಾಷಿಕ ಹಾಗೂ ಮೂರು ಐಚ್ಛಿಕ ವಿಷಯಗಳಿದ್ದು ದ್ವಿತೀಯ ಬಿ.ಎ. ತರಗತಿಗೂ 2019–20ರ ಜುಲೈ ಮತ್ತು ಜನವರಿ ಆವೃತ್ತಿಗಳಲ್ಲಿ ಬೋಧನಾ ಶುಲ್ಕವಾಗಿ ರೂ : 3400/–ಗಳನ್ನೇ ನಿಗದಿಗೊಳಿಸಿ ಪ್ರಕಟಣೆಯಲ್ಲಿ ತಿಳಿಸಿ ಅದರಂತೆ ವಿದ್ಯಾರ್ಥಿಗಳು ಪಾವತಿಸಿರುತ್ತಾರೆ. ಪ್ರಸ್ತುತ 2020–21ರ ಜುಲೈ ಆವೃತ್ತಿಯಲ್ಲಿಯೂ ದ್ವಿತೀಯ ಬಿ.ಎ ತರಗತಿಯ ಬೋಧನಾ ಶುಲ್ಕ ರೂ : 3400/– ಎಂದು ಪ್ರಕಟಣೆ ಹೊರಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ KSOU Ordinance relating to the prescription of Fee – 2017 ಆಧ್ಯಾದೇಶದಲ್ಲಿ ದ್ವಿತೀಯ ಬಿ.ಎ. ತರಗತಿಯ ಬೋಧನಾ ಶುಲ್ಕ ರೂ. 3200/– ಎಂದಿರುವುದನ್ನು ರೂ. 3400/–ಗಳಿಗೆ ಪರಿಷ್ಕರಿಸುವ ಸಲುವಾಗಿ ವಿಷಯವನ್ನು ಶೈಕ್ಷಣಿಕ ಮಂಡಳಿಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಯುಜಿಸಿ ನಿರ್ದೇಶನದ ಮೇರೆಗೆ 2020–21ರ ಜುಲೈ ಆವೃತ್ತಿ ಪ್ರವೇಶಾತಿಯನ್ನು ಪ್ರಾರಂಭಿಸಬೇಕಿದ್ದ ಹಿನ್ನೆಲೆಯಲ್ಲಿ ಶೈಕ್ಷಣಿಕ ಮಂಡಳಿಯ ತೀರ್ಮಾನವನ್ನು ಕಾಯ್ದಿರಿಸಿ ಕೈಗೊಂಡಿರುವ ಕ್ರಮಕ್ಕೆ ಅನುಮೋದನೆ ಕೋರಿ ಮಾನ್ಯ ಸಭೆಗೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ : **1) KSOU Ordinance relating to the prescription of Fee – 2017 & KSOU Ordinance relating to the prescription of Fee – 2018 ಆಧ್ಯಾದೇಶಗಳಲ್ಲಿ Processing Fee ಹೆಚ್ಚಿಸಲು ಅನುಸಮರ್ಥನೆ ನೀಡಲಾಯಿತು.**

**2) KSOU Ordinance relating to the prescription of Fee – 2017 & KSOU Ordinance relating to the prescription of Fee – 2018 ಆಧ್ಯಾದೇಶಗಳಲ್ಲಿ Processing Fee ಹಾಗು Skill Development Fee ಎಂಬ ಶೀರ್ಷಿಕೆಗಳನ್ನು Admission Fee ಹಾಗು Development Fee ಗೆ ಅನುಗುಣವಾಗಿ Admission (Processing) Fee ಹಾಗು Development (Skill) Fee ಎಂದು ತಿದ್ದುಪಡಿ ಮಾಡಲು ಸಭೆಯು ಅನುಸಮರ್ಥನೆ ನೀಡಿತು.**

ಕುಲಸಚಿವರು                                                ಕುಲಪತಿಗಳು

3) **KSOU Ordinance relating to the prescription of Fee – 2017 & KSOU Ordinance relating to the prescription of Fee – 2018** ಅಧ್ಯಾದೇಶಗಳಲ್ಲಿ ದ್ವಿತೀಯ ಬಿ.ಎ. ಬೋಧನಾ ಶುಲ್ಕವನ್ನು ರೂ.**3,200/–** ರಿಂದ ರೂ.**3,400/–** ಗಳಿಗೆ ಹೆಚ್ಚಿಸಲು ಅನುಸಮರ್ಥನೆ ನೀಡಲಾಯಿತು.

ಅಂತಿಮವಾಗಿ 56ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು